# TIGHT BINDING BOOK

UNIVERSAL
LIBRARY
OU_200867
UNIVERSAL
LIBRARY

ಮುದ್ರಕರು:
ಶ್ರೀ ಆರ್. ಎಸ್. ಹಿರೇಗಂಗೆ,
ದೀಪಮುದ್ರಣಾಲಯ,
ಹೊನ್ನಾವರ

ಲೇಖಕರು:
ಶ್ರೀ ವಿ. ಜಿ. ಭಟ್ಟ,
ಕಡತೋಕಾ

ಪ್ರಕಾಶಕರು:
ಶ್ರೀ ಮಾ. ಗ. ಶೆಟ್ಟಿ,
ಬಂಕಿಕೊಡ್ಲ

# ತಿದ್ದುಪಡಿ.

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೨ | ೧೨ | ಯಾನ | ಯೂನ |
| ೧೮ | ೬ | ರಂತೆ | ಕಂತೆ |
| ೨೯ | ೧ | ತೋರಣದಿ | ಲೋರಣದಿ |
| ೩೫ | ೧ | ಹುತ | ಹುತ್ತ |
| ೩೭ | ೧೩ | ಕೊಂದಿದು | ಕೊಂದಿಹುದು |
| ೪೦ | ೮ | ಗಾವು | ಗೀವು |
| ೪೪ | ೩ | ಬಾಗಿಲೆ | ಬಾಗಿಲಿಗೆ |
| ೪೭ | ೭ | ನನ್ನ | ನನ್ನಾ |
| ೪೭ | ೯ | ಸುವದು | ಸುವದಿದು |
| ೫೭ | ೧೦ | ಬಲ್ಲ | ಲಿಲ್ಲ |
| ೬೦ | ೧೫ | ಯಂತರವು | ಯಂತವದವು |
| ೭೪ | ೨ | ನೋಡನೇ | ನೊಡನೆ |
| ೮೨ | ೧೧ | ತಿಂದು | ಅಂದು |
| ೯೪ | ೫ | ತಾನೆ | ತಾನೆನೆ |

ಈ ಸಂಗ್ರಹದಲ್ಲಿ ಬರುವ "ನಾಡೋಜ ಪಂಪ"ಕ್ಕಾಗಿ ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಕ್ಷಮೆ ಬೇಡುತ್ತೇನೆ. "ಕಣ್ಣೆಸಳತೆಗೆ ನಿಲ್ಲು" ರವೀಂದ್ರರ ಗೀತೆಯೊಂದರಿಂದ ಪ್ರೇರಿತ ವಾಗಿದೆ. ಇವುಗಳಲ್ಲಿ 'ಆ ಒಂದು' ಬಿಟ್ಟರೆ ಉಳಿದವುಗಳೆಲ್ಲ ಇಷ್ಟುದಿನ ಕತ್ತಲೆಯಲ್ಲಿಯೇ ಬಿದ್ದಿದ್ದವು. ಪ್ರಕಟಣೆಗೆ ಮುಂದೆ ಬಂದ ಗೆ| **ಮ. ಗ. ಶೆಟ್ಟರಿಗೆ** ಕೃತಜ್ಞನಾಗಿದ್ದೇನೆ. ಮುದ್ರಿಸಿ ಕೊಟ್ಟ ಶ್ರೀ **ಆರ್. ಎಸ್. ಹಿರೇಗಂಗೆ**ಯವರ ಉಪಕಾರ ಸ್ಮರಿಸಿದಷ್ಟೂ ತೀರದು.

ಪರ್ಣಕುಟಿ

ವಿನಾಯಕನ ಚೌತಿ — ವಿ. ಜಿ ಭಟ್ಟ.

೧೯೪೬

# ಓಂ ನಲ್.

ಓ ಮುಗುದೆ
ನೀ ತೆಗೆದೆ
ಒಲುಮೆ ಬಾಗಿಲನಿಂದು
ಈ ಜಗದೆ ನಾ ಬಂದು
ಧನ್ಯನಾದೆ.
ಕಣ್‌ತುಂಬ
ಹೊನ್‌ಬಿಂಬ
ನಡುವೆ ನೀ ಜಗದಂಬ
ಸಾವೆಂಬ ಹಸಿಹುಸಿ
ನಂಬಲಾರೆ.

## — ೯.

ದೃಷ್ಟಿಯಾಚೆಗೆ ನಿಂತ ನಿನಗೆ ಕಲ್ಪನೆಯಲ್ಲಿ
ಬರೆದೆ ಗೀತೆ
ಎಂಟುದಿಕ್ಕಿಗೆ ಹಾರಿ ಸೌಂದರ್ಯದಾದರ್ಶ
ಸುರಿದು ಸೋತೆ
ಕಣ್ಣುಗಳನೆಲ್ಲ ತುಂಬಿದೆ ನನ್ನಕವಿತೆ
ಹೆಣ್ಣುಕಲೆಗಳಿಗೆಲ್ಲ ಮೂಲವಲ್ತೆ?
ಕಲ್ಪನೆಯ ಕೈವಾಡ ನೋವಿನೀಯಾನಂದ
ವೆಲ್ಲಗಾಳಿ
ನಿಲ್ಲವವು ನೆಲಕೂರಿ ಸತ್ಯದಂಗಾಂಗದಲಿ
ಹುಸಿಯ ಹೂಳಿ
ಚಿತ್ರಚಿತ್ರಿತ ಸೊಬಗಿನಾದರ್ಶ ಮೇಲು
ವಾಸ್ತವತೆಂ ಶಾನಕಿದೆ ಜಯವುಳ್ಳಸೋಲು!

---

# ಕಾರಣ.

ನಿನ್ನನೇಕೆ ಬಯಸಿಬಂದೆನೆಂಬುದರಿಯೆಯಾ?
ತಿಳಿದು ಕಂಗದಿರಲಿ ಮಂಜನೆಲ್ಲ ಹರಿದೆಯಾ?
ಪ್ರಿತಿ ನನ್ನ ಪಾತಳಿಯನು ನೆಮ್ಮಿ ಹುಟ್ಟಿತು
ಸೆಲೆಯು ಸೀಳಿ ಚಿಮ್ಮಿ ತೋರಣಗಳ ಕಟ್ಟಿತು.
ಕರುಣೆಯೊಲುಮೆಯೊಂದು ತಾಳ; ಕರುಳುನೊಂದಿತು
ಜೀವದಂದ ನೆರಳಿನಿಂದ ಬೆಳಗಿ ಬಂದಿತು
ನಿನ್ನನೇಕೆ ಬಯಸಿಬಂದೆನೆಂಬುದರಿಯೆಯಾ?
ಅರಿಯಲೇತಕನಿಸೆಸಾಕು ಹೃದಯ ತೆರೆದು ಬಾ.

# ಮೊದಲ ನೋಟ.

ಎದೆಯೊರತೆಯಾರಿತ್ತು
ಮರಣ ವೈದೋರಿತ್ತು
ಕೋರಿತ್ತು ನಿನ್ನಜೀವ್
ಆ ಕಂತು ವೊಲಿದಂತು
ಕಂದೆರೆದ ಯೆದೆಗೊರೆದ
ತುಂತುಂಬಿದೀಭಾವ!
ಸಾಳಿನ ಬಾಳಿನ
ಕಿಡಕಿ ಬಾಗಿಲುತೆರೆದು
ಇಳಿಯಿತು ಮೇಲಿನ ಹೊಸಜಾವ್
ನಿನ್ನಕಣ್‌ಗೋಲದಿ
ಜನುಮಗಳು ಮೇಳದಿ
ಮೂಡಿ ಮೆಟ್ಟಿದವು ನಮ್ಮೈಯು ಸಾವ್

---

## ಬಡವ-ಬಡವಿ.

ನಾನು ಬಡವ ನೀನು ಬಡವಿ
ಸಾಕು: ಸೇರಿದೂರದಡವಿ
        ಹೊಸತು ಬಾಳಬಾಳುವ
ನೋವನೆಲ್ಲ ನೆಳಲಿನಲ್ಲಿ
        ಬಾಽ ಹೋಗಿ ಹೂಳುವ
ನಮೋ ನಮೋ ಏ ಸಮಾಜ
ಬಾರೆ ಬೇಗ ದೂರ ರಾಜ
        ರಾಣಿಯಾಗಿ ಆಳುವ
ನಾಗರಿಕತೆಯೆಂಬ ಗೋಜ
        ನಲ್ಲಿಹೋಗಿ ಕೇಳುವ
ಹುಳಗಳೊಡನೆ ನೂಲುವ
ತಪಸಿಯಾಗಿ ಬೇಳುವ
        ನಾವು ನಿನ್ನ ಮಕ್ಕಳೆಂ
        ಕಿವಿಯೊಳವಗೆ ಹೇಳುವ
        ಮೋನವಾಗಿ ಹೇಳುವ

# ಕಲ್ಪನೆಯ ಕುವರಿ.

ಹಿಡಿದು ಕೈಯ್ಯಲೊಂದು ದೀಪ
ಓಡೋಡುತ ಬಾಳದ್ವೀಪ
ದಿಂದ ನನ್ನ ಯೆದೆ ಸಮೀಪ
ಹಂಸಪಾದಳಾಗಿ ದಿನ್ನೆ
ಗಿರಿಕಂದರ ದಾಟಿ ಕನ್ನೆ
ಬರುವೆ ಕಲ್ಪನೆಯ ಕುವರಿ
ಪಯಣದಿಂದ ಮೈಯು ಬೆವರಿ

ನಿನ್ನಕಣ್ಣು ಮಿಂಚು-ಮೀನು
ಬೊಮ್ಮನ ಕೈ ಬರೆಹ ನೀನು
ಅನಿತು ದೂರದಿಂದ ಬಂದು
ಹರೆಯ ಮೊಗಕೆ ಮುದ್ದನೊಂದು
ಬಿತ್ತಿ ಮರಳಿ ಹೋಗುವೆ
ಬೇರೆಜೀವಿಯಾಗುವೆ

ಬಾನು ಭೂಮಿ ಹೂವು ಚುಕ್ಕಿ
ನಾನು ನೀನು ಎಲ್ಲಸಿಕ್ಕಿ
ವಿರಹದಲ್ಲಿ ಮಾಗುತ

ಸೀಮೆಯರಿಯಲಾಗದಂತ
ದಾರಿಯಲ್ಲಿ ಸಾಗುತ
ಆಗ ನಕ್ಕು ಈಗ ಬಿಕ್ಕಿ
ನಡೆವವನೊಳಾಗುತ

— ೮ —

## ನಾನು ಹುಚ್ಚನಾದುದೇಕೆ?

ನಾನು ಹುಚ್ಚನಾದೆನೇಕೆ?
ಕೇಳು ನಾಡಮಣ್ಣನು
ಮುನಿದಲಂನನ್ನಾಕೆ
ಮಿನುಮಿನುಗುವ ಕಣ್ಣನು
ಭ್ರಮಿಸಿ ಚಿತ್ತ ಭೂಮಿಸುತ್ತ
 ತಿರುಗುತಿರುವೆನೇತಕೆ
 ಗಾಳಿಬೆಳಕು ಬಾನಸೆಳಕು
 ಮೂಲ ಮರುಳು ಜೀತಕೆ
ಬಾನ ಹೂವ ಮೂಸಿ ಜೀವ
ಕನಸಿನಲ್ಲಿ ಸಾಗಿದೆ
ಯೆಲ್ಲೊ ಯೇನೊ: ಸೊಲ್ಲದೇನೊ
ಕಿವಿಯತಳಕೆ ತಾಗಿದೆ
ನಾನು ಹುಚ್ಚನಾದೆನೇಕೆ
ನಾನೆ ತಿಳಿಯಲಾರದೆ
ಸಿಳ್ಳಹಾಕಿ ಮಳ್ಳ ನೂಕಿ
ನಡೆದೆ: ಬಳಿಯ ಸಾರುವೆ.

*

# ಮದುವೆಗೆಂದು ಹೆಣ್ಣು.

ಗೆಳತಿ ನನ್ನ ಮದುವೆಗೆಂದು
ತಂದೆಯೊಡನೆ ಚೆಂದದೊಂದು
ಹುಡುಗಿ ನೋಡಿ ಬಂದೆ ನಿಂದು!
"ಮನಕೆ ಬಂದಿತೇ? ನಿಮ್ಮ
ಮನಕೆ ಬಂದಿತೆ?"
ಅಹಹ ಎಂತ ಚೆಂದಹುಡುಗಿ
ನಿನಗೆ ನೂರುಪಾಲು ಬೆಡಗಿ!
"ಓಹೊ ಮನಕೆ ಬಂದಿತೇ?
ನಿಮ್ಮ ಮನಕೆ ಬಂದಿತೆ?"
ಜೊತೆಗೆ ತರುವಳಿಷ್ಟುಚಿನ್ನ!
"ಮುಗಿಸು ಗೆಳೆಯ ಬೇಗ ನಿನ್ನ
ಕತೆಯ: ಮನಕೆ ಬಂದಿತೇ?
ಹುಡುಗಿ ಮನಕೆ ಬಂದಿತೇ?"
ಗೆಳತಿ–ಒಡತಿ–ಬಂದೆನೋಡಿ
ನೋಡಿದೊಡನೆ ಬಂದೆ ನೋಡಿ
ದೀಪ ನೊಂದಿತೇ—ಒಳಗೆ
ದೀಪನೊಂದಿತು.

—•— ಗೆ.

ನಾ ನಿನ್ನ ಪತಿಯಲ್ಲ
ಗೆಳತಿ, ಇನಿಯು
ನನಗಾರು ಗತಿಯಿಲ್ಲ
ನಮ್ಮೆದೆಗಳತಿಸನಿಯು
ನಿನ್ನೊಲುಮೆಯಿರೆ ಸಾಕು
ಬಹಜನುಮಗಳ ನೂಕುವೆನುಲೀಲೆಯಿಂದ
ಮೀನಾಕ್ಷಿ ದೀನಾಕ್ಷಿ
‘ ಅವನ ’ ಸತಿ ನೀ ಸಾಕ್ಷಿಯಿರೆ ಬಾಳಿನಂದ.
ಜಡದೇಹ ದೂರಿರಲಿ
ಕೇಳಿಸುತಿರೊಳಮುರಲಿ
ಆಗೀಗ ಕಂದೆರೆದು ತುಂಬುಜೀವ
ನಿನಗಾಗದಿರೆ ಕಳುಹು
ನಿನ್ನ ಪುತ್ತಳಿ-ಮಗುವ
ಅದರನೊಸಳನಲಿರಿಸು
ನಿನ್ನ ಕಣ್‌ತುಟಿ ನಗುವ
ಬಾಳೇನು: ತಾಳೇನು: ಆಳೇನು ನೋವ
ನಾ ನಿನ್ನ ಪತಿಯಲ್ಲ.

## ಬೇಲಿ.

ಅವಳನನ್ನಮನೆ ನಡುವೆ ಜೋಲುತಿದೆ ಮುಳ್ಳುಮುಳ್ಳುಬೇಲಿ
ಅವಳು ಸಂಜೆಯಲಿ ಬರುವಳಲ್ಲಿವರೆಗೆನ್ನ ಹಾಡಕೇಳಿ
ಇರುಳಗಾಳಿಯುವಳುಸಿರಲುರುಳಿ ಬೇಲಿಯಲಿ
ನುಸುಳಿಬಂದು
ನಿದ್ದೆಹೋದ ನನ್ನೆಬ್ಬಿಸುವದು: ಮೈನವಿರು ಹಬ್ಬಿನಿಂದು
ಆಃಕಡೆಗೆ ಕಣ್‌ಮಿಂಚಿನೋಡಿ ಕಾಣುವೆನು ಮಿನುಗುದೀಪ
ಮೌನಕೇಳುವದು “ಎಂದುತರುವೆ ನೀ ನಮ್ಮ
ಸಮಸಮೀಪ?”
ಏನೊ ಏನೊ ಮತ್ತೇನೊ ಸಾಗುವದು ಬೇಲಿಯಾಚೆಯೀಚೆ
ನೆಕ್ಕು ಪರಿಮಳಿಸಿ ಬೇಲಿ ಹೇಳುತಿದೆ “ಸಾಕ್ಷಿಯಾಗಿ ಸೋತೆ
ನಾನು ಹರಿದನಕ ಇವರು ಕೂಡುವದುಯೆಂತೊ
ಹೇಳಲಾರೆ
ಇವರು ಕೂಡಿದುದ ನೋಡಿದನಕ ನಾ ಹರಿದು
ಬೀಳಲಾರೆ”

## ನೆನಹು.

ಸೊನ್ನೆ ಸೊನ್ನೆ ಸೊನ್ನೆಯಾಗಿ
ಜಗವೆ ನನಗೆ ತೋರುತಿರೆ
ಹುಬ್ಬು ಹಣೆದು ಹುಚ್ಚನಂತೆ
ದಿಬ್ಬ ಬಯಲು ಹಾರುತಿರೆ
ಕಂಡೆನೆರಡು ಕಣ್ಣನು-
ತನಗೆ ತಾನೆ ನಸು ನಗುತಾ
ಸಾಗಿದೊಂದು ಹೆಣ್ಣನು
ನನ್ನ ನೋಡಿ ನಸುನಗುವವ
ಳನ್ನು ಕಂಡು ನಕ್ಕೆನು.
ಜಗದ ಸೊನ್ನೆ ಹರಿದು ಅರಿಯು
ದೊಂದು ಬಲೆಗೆ ಸಿಕ್ಕೆನು.
ಹಿಂದೆ ತಿರುಗಿ ತಿರುಗಿ ನೋಡಿ
ನಡೆದಳವಳು ಮುಂದಕೆ
ಅವಳು ಕಾಣದಾಗೆ ಬಣ್ಣ
ಬಂದಿತವಳ ಚೆಂದಕೆ.

ಜಗದ ಸೊನ್ನೆಯಾಕಣ್ಣು
ಹೊಳಪಿನಿಂದ ಹಿಂಜಿತು
ಅವಳ ನೆನಹು-ನೆಳಲು ಬೀಳ
ಲೆದೆಯು ದುಗುಡವಂಜಿತು.

ಯಾವಲೋಕದಾವದಾರಿ
ತುಳಿಯುತಿಹಳೊ ತಿಳಿಯೆನು
ತಳವುಳಾಗೆ ಸೇರಿಬಿಡುವೆ
ನವಳಬಳಿಯ ನೆಳಲನು!

# ಪಲಾಯನ.

"ಏನು ಕಾವಲೆಯೊಳು ಬೆಳ್ಳಿ ಮೂಡಲುಬಂತು"
"ಎಚ್ಚೆಇರುವೆನು ನಿದ್ದೆಬರುವದೆಂತು?"
"ಮೆಲ್ಲಗುಲಿ ಬಾ ಹೊರಗೆ: ಅವರೆಚ್ಚರಾದಾರು"
"ಎಚ್ಚರಾದರು ನನ್ನ ತಡೆವರಾರು?"
"ಕೈಯನಲುಗಿಸಬೇಡ ಬಳೆಸದ್ದು ಬಲುಮೋಸ"
"ಪಾಪ ಕಿವಿಮುಚ್ಚಿರುವುದೊರಕಸೀಸ"
"ಆಕೊ! ಬಾಗಿಲಿನ ಚಿಲಕ... ಬಲುಹಗುರವಾಗೆತ್ತು"
"ಅಯ್ಯೊ ಬದ್ದಿಹರವರು ನಿದ್ದೆ-ಸತ್ತು!"
"ಹಾರಬಳೆಕಾಲುಂಗುರವನಿಲ್ಲೆ ಚಲ್ಲಿಬಿಡು
ಡಂಗುರವಹೊಡೆಯುವವು ದಾರಿತುಂಬ"
"ಲೇಸು ಹೋಗುವದೆಲ್ಲಿಗೀಗ ನೆಟ್ಟಗೆ? ಹೇಳಿ"
"ಅದನು ತಿಳಿದರೆ ನಾನದೆಂತ ಹುಂಬ!"
"ಏನು ಗುರಿ ಗೊತ್ತಿರದೆ ನಡೆವ ಚದುರರೆ ನೀವು!"
"ಆಹುದು ಮೂಗಿನ ಮುಂದೆ ನನ್ನ ದಾರಿ"
— ಮಿಂಚಿಹೋದರು ಬಾನಿನಂಚಿನೆಸಳಿನ ಮರೆಗೆ
ಕಡಲು ಬೆಟ್ಟಗಳ ಕಾಲಡಿಗೆ ತೂರಿ!

## —ಗೆ.

ಎಲ್ಲಾದರೇನು
ಓ ಚಂದನೂರಿನಮಗಳೆ
ಚೆಲುವೆಯಾಗಿರು ನೀನು ಎಂದೂ
ಈ ಬೇರೆ ಜನುಮಗಳೆ
ನಡುವೆ ಬಂದರದೇನು?
ಸೊಗವಾಳುವೆನು ನಾನು
ಸತತನೊಂದು
ಸೂರ್ಯಮಗೆ ಚಂದ್ರಿಕೆಯು ಸಿಗುವ ಗಳಿಗೆ
ಬಂದೇವು ನಾವು ವ್ಯೈಸನಿಯ— ಬಳಿಗೆ
ಅಲ್ಲಿ — ಬಲು ದೂರದಲಿ
ನೀನು ನೋಡಿದ ಚುಕ್ಕೆ
ಯನೆಕಂಡು ನಕ್ಕೆ
ನೀ ಮಿಂಚ ನೀರಿಂಪಲೀಮುತ್ತತಂದೆ
ಅಲ್ಲಿ ನೀಸುರಿದ ಕಂಬನಿ ಮೋಡವಿಂದೇ
ಮಳೆಗರೆದು ನಿವಿರಿಸಿತು ಇಲ್ಲಿಯೀಬನವ
ಸಾಕು: ಕಣ್ಣೆವೆತೆರೆದು ಕಳುಹು ಹೊಸದಿನವ

## ಬಡಅಳಿಯ.

ಬಡಃಅಳಿಯ ಬಂದು
ಬಾಗಿಲಲ್ಲಿ ನಿಂದು
ನಿಂದು ನಿಂದು ನಿಂದು
ಮನದಿ ಭಾಳನೊಂದು ...

ಎದುರು ಮೂವ ಗಾದಿ
ಮೇಲೆ ಕಾಲನೀಡಿ
ಒಂದೇಸವನೆ ಬೀಡಿ
ಸೇದಿ ಸೇದಿ ಸೇದಿ ...

ಒಳಗೇನೋ ಹಚ್ಚಹಿಚ್ಚೀ
"ಭಾವ! ಗಡ್ಡಮೀಸೀ
ಮೀಸಿ ಮೀಸಿ ಮೀಸಿ
ನೋಡಿ! ನೋಡಿ! ಇಸ್ಸಿ" ...

ನೀರುಸೇದಿ ಸೇದಿ
ನಾರಿ ಬಂದ ಬಃದಿ
ನಾರಿ ಬಲದ ಬಃದಿ
ತಿರುಗಿತಲೆಯಃಬಾಗಿ ...

ಒಳಗೇನೋ ಪಕ್ವ ಒಪ್ಪಿ
ಎದೆಯಲ್ಲಿ ಕಾದು ಬಿಸಿ
ಎದೆಕಾದು ಕಾದು ಬಿಸಿ
ಕಣ್ಣೀರುಉಕ್ಕಿ ಸೂಸಿ ...

ಮಸೆದಾರಿಯಲ್ಲಿ ಘಾಷಿ
"ತವರಿನಗೆ ಸಾಕು ... ದಾಸಿ
ನಾನೇನೂ ಅಲ್ಲ ದೋಷಿ
ಪಾಪಿ ಪಾಪಿ ಪರದೇಶಿ"

# ನಿತ್ಯವೂ ಬರುವೆ.

ಹೊಸ್ತಿಲಲಿ ಬರೆದಿತ್ತು
"ಸ್ವಸ್ತಿ ಓಂ ನಲ್ ಗೆಳೆಯ
ನಿತ್ಯವೂ ಬರುವೆ ನಾನಿಲ್ಲಿ ಸಂಜೆ"
ಅಂತೆ ಮನೆಯೊಳಗುಳಿದು
ಚಿಂತಿಸುತ ಮೊಗವಿಳಿದು
"ಎಂತ ಮಾತಿದು! ಸುಳ್ಳರಂತೆ" ಯೆಂದೆ

ಹೊರಟು ಬಾಗಿಲನಿಕ್ಕೆ
"ಬಂದೆ"! ಯೆನ್ನುತ ನಕ್ಕೆ
ಹೊರಗೊಳಗೆ ಸುಳುಮುಳಿಸಿ ಕಾಣದಾದೆ.
"ತೆರೆದಿರಿಸು ನೀ ನಿತ್ಯ
ಬರುವುದೆಂದಿಗು ಸತ್ಯ"
ಮರೆಯುಲಡಗಿದ ನೀನು ಮಿಂಚಿಹೋದೆ!

## ಹಾಲ ಹುಡುಗಿ

ದುಂಡುಮೋರೆ ಹರಕುಸೀರೆ
ಹುಡುಗಿ ನಿತ್ಯವೆರಡುಸಾರೆ
ನಮಗೆ ಹಾಲತರುವಳು
ನಾನು ಯೆಂದುಯೆದುರುಬಾರೆ
ಬಂದಡವಳು ಸೆರಗನೋರೆ
ಮಾಡಿ ಹಿಂಸಬಾಗಿಲಲ್ಲಿ ಪೊಲ್ಲಬರುವಳು
ಅಜ್ಜಿಯೊಮ್ಮೆ "ಹುಡುಗಿಬೆಳೆದೆ
ಮದುವೆಯೆಂದು?" ಕೇಳಲು
ಹುಡುಗಿ ನಾಚಿ ಚೆಂದ ಚೆಂದ
ಮೊಗಕೆ ಸೆರಗುಬೀಳಲು—
ಯಾಕೊ ಯೇನೊ ಹಾಗೆ ಹೀಗೆ
ಎದೆಯುಲುದಕ ಹನಿಸಿತು
ಸೆರಗು ಸರಿದು ಮೊಗವನೋಡೆ
ಏನೊ ಏನೊ ಎನಿಸಿತು
ಅಜ್ಜಿ ಬಿಡದೆ "ಮದುವೆಯೆಂದು?"
ನೂರುಸಾರೆ ಕೇಳಲು

'ತನ್ನ ಮದುವೆಯಾಗದನಕ
ನನ್ನಮದುವೆಮಾಡನಂತೆ
ಅಪ್ಪ' ಎಂದು ಹೇಳಲು—
ಯಾಕೊ ಯೇನೊ ಹಾಗೆ ಹೀಗೆ
ಎದೆಯು ಕುದಿಯದೇರಿತು
ಸನಿಯ ಕಾನಿನಲ್ಲಿ ಗೂಗೆ
ಯೊಂದುಕೂಗಿ ಹಾರಿತು.

## ಭಾವಾವೇಶ.

ಈ ಲೋಕ ತೀರಸಣ್ಣ
ನನ್ನೆದೆಯನು ತುಂಬಲು
ಆ ಬಿಲ್ಲಿನೇಳು ಬಣ್ಣ
ಮೀರಿ ಕಣ್ಣ ಹಂಬಲು
ಯಾವ ಹೂವ ಕಂಪು ಸೋಂಕಿ
ಶಾವಲೋಕದುಸಿರುದೀಂಕಿ –
ಡುತಿದೆ ಧಮನಿಯಾಳದಿ!
ಎಂತ ಪ್ರಳಯ ದಿಮಿದಿಮೆನುತ
ಲಿರುವುದೊಂದೆ ತಾಳದಿ!
ಬೀಸುಗಾಳಿ, ತಿರುಗುಭೂಮಿ
ಬೆಳಕೆ ಮೂಲೆಮೂಲೆಯ
ತುಂಬು: ಜೀವ ನಂಬು ಸಾವ
ಹಳಿವ ಭಾವ ಲೀಲೆಯ

## ಹಳೆಯ ಪುರಾಣ.

ಆಕೆ: ಮುದುವೆಮ್ಮುಂಚೆ ಬೆನ್ ಹತ್ತಿ ಓಣಿಯಲಿ
ಅಲೆಯುತಿದ್ದಿರಲ್ಲ?
ಆತ: ಮುಂಚೆಯೇಕೆ ಈಗಾನು ನಿನ್ನ
ಬೆನ್ ಬಿಟ್ಟೆನೇನು ನಲ್ಲೆ?
ಆಕೆ: ಈರೀತಿ ಬೇರೆ ಆಹುಚ್ಚೆ ಬೇರೆ
ಕೆಮ್ಮಿದಿರಿಯೆಷ್ಟುಸಾರಿ?
ಆತ: ರೀತಿಗೀತಿಗಳಮಾತು ಸೂತಕಕೆ
ಹೇಗೆಸೆದೆ ನೋಟವೋರೆ!
ಆಕೆ: ಮನೆಯತನಕ ಬರುತಿದ್ದಿರೇಕೆ
ಕಣ್ ಹೊರಳಿಸುತ್ತ ಸುತ್ತೆ?
ಆತ: ಮಾಡವೇರಿ ನಾ ಹೋದದಾರಿ ನೀ
ನೋಡೆ ಕೆಲಸವಿತ್ತೆ?
ಆಕೆ: ಅಂದು ದೀವಳಿಯ ದಿವಸ ದೂರದಲಿ
ನಿಂದು ಸಿಳ್ಳುಹೊಡೆದು...
ಆತ: ಯೇತಕಾಯಿರುಳು ನನ್ನ ಕನಸಿನಲಿ
ಬಂದೆ ಹೂವ ಮುಡಿದು?

ಆಕೆ: ನಿಮ್ಮ ಕನಸಿನಲಿ ನಾನು ಬಂದನೇ?
ಇಲ್ಲ ನೀವೆ ನನ್ನ...

ಆತ: ಒಳಿತು ಹೇಳಿಬಿಡು ಯೇನ ಮಾಡಿದೆನು
ಬಂದು ನಾನು ರನ್ನ.

ಆಕೆ: ನಿಮ್ಮ ಕನಸಿನಲಿ ನಾನುಬಂದು ಮಾ-
ಡಿದುದ ಮೊದಲು ಹೇಳಿ

ಆತ: ಬಾರೆ ಸನಿಯ ಕಿವಿಯಲ್ಲಿ ಹೇಳುವೆನು
ಕೇಳೀತು ಕೆಟ್ಟಗಾಳಿ

ಆಕೆ: ಇಸ್ಸಿ! ಇಸ್ಸಿ! ನಾನೇನು ಹೀಗೆ
ಮಾಡಿಲ್ಲ ದೇವರಾಣೆ

ಆತ: ಇರಲಿ ಹೇಳು ನಾನಿನ್ನ ಕನಸಿನಲಿ
ಬಂದ ಕಥೆಯು ಜಾಣೆ

ಆಕೆ: ಮಲಗಿದಾಗ ಹೇಳುವೆನು ಈಗ ಇದು
ಬೇಡ ಅದನು ನೋಡಿ

ಆತ: ಯಾಕೆ ನಾಚುವದು? ಯೇನು? ಹೇಳಿಬಿಡು
ಯೇನು? ದೀಪಖೋಡಿ?

## ಸತ್ಯವಂತ ಕಾಮು.

ಮೂರುತಾಸು ಕಳೆದೆನಂದು
ಅಸತ್ಯ ತಿಳಿಯಲೆಂದು
ನಿಜವೆ ಹೇಳು ಎಂದರವಳು
ಸುಮ್ಮಗುಳಿದಳು
ತುಟಿಯಮಾತು ಕಣ್ಣಮಾತು
ಬಿರುಸು ಲಲ್ಲೆ ಮಣ್ಣಿಗಾಯ್ತು
ಬಿಮ್ಮಗುಳಿದಳು
ಗುಮ್ಮಗುಸಕು ಬೇರೆಬೇರೆ
ಮಲಗಿಕೊಂಡೆವು
ಕೆಮ್ಮಿಸೀನಿ ನೂರುಸಾರೆ
ಮನವ ಕಂಡೆವು!
'ಆಗ' ಮೆಲುದನಿಯಲಿ ನಿಜವೆ?
ಹೇಳು ಎನ್ನಲು
ಪಾಪ ಶಕ್ತಿಸಾಲ ಅವಳಿ
ಗಹುದು ಅನ್ನಲು!

---

## ಹುಚ್ಚು ಹೆಂಡತಿ.

ಈಗ ನಿನಗೆ ಕೊಟ್ಟ ಮುದ್ದು
ಹೋಯಿತೆಲ್ಲಿಗೆ?
ಆಗೋ ಎದೆಯ ತಣಿಸಿ ಸೇರಿ
ತರಳು ಮಲ್ಲಿಗೆ!
ಈಗ ಕಿವಿಯೊಳುಲಿದ ಮಾತ
ನೆಲ್ಲ ಮರೆತೆಯ?
ನಲ್ಲ, ಅದೇಸೊಲ್ಲ ಕುಕಿಲಿ
ತುಂಬಿ ಕೊರೆತೆಯ—
ಹಕ್ಕಿಜೋಡು ಬಾನ ನೀಲಕೆ
ಹಾರುತಿಹುದು ನೋಡು ಮೇಲಕೆ
ಹುಚ್ಚು ಹೆಣ್ಣೆ ನಾಳೆ ನಾನು
ಸತ್ತುಬೀಳಲು
"ಸಾಯಲಿಲ್ಲ ನಿದ್ದೆಮಾಡು
ತಿರುವ" ಹೇಳಲು
ಹಿಂದುಮುಂದೆ ನೋಡೆನೀನು
ಮಳ್ಳಿಯೊಂದಿಗೂ

ಕೊಳ್ಳಿಯಿಡದೆ ಹೋಗಲಿದೇ
ಬೇಕು ಮಂದಿಗೂ
ಇಂತವೇಳೆ ಎಂತಮಾತು- ಸಾಕು- ನಲ್ಲನೆ
ಕೇಳೆ ನುಡಿದೆ ನನ್ನ ಮಾತ ನಾನೆಬಲ್ಲೆನೆ?

# ಅರಮನೆ.

ಒಂದೂರು ಆವೂರಿಗೆಲ್ಲ ಬೆಳಕನುಬೀರಿ
ನಿಂದಿರುವುದರಸುವುನೆಯು
ಅಂದಚೆಂದಗಳ ಶಬ್ದವನುದ್ಧಕೂತೂರಿ
ಎಂದಿಗೂ ಬರದು ಬಣ್ಣನೆಗೆ ಕೊನೆಯು
ಛಲವುಂಟೆ ನೋಡಲಿಕೆ? ಬನ್ನಿ ಇದಹಾದಿ
ಒಲವಿಂದ ಕಾವ್ಯಗಳನೆಲ್ಲಓದಿ.
ನೂರಾರು ಮಹಕವಿಗಳೊರೆದರಮನೆಯ ಚೆಲುವು
ನೀರಾಗಿ ಹರಿದುಹೆಪ್ಪ-
ಒಪ್ಪಾಗಿ ನಿಂದಿಹುದು ಕಾಳಿದಾಸರತಂಡ
ಬೆಪ್ಪಾಗುವದು ಕಂಡನಿಮಿಷ-ಬೆಪ್ಪ!
ಅದು ಕೀಟ್ಸಕಿವಿಸೆಳೆದ ದಿವ್ಯಸ್ವಪ್ನ
ಇಂದ್ರನಾದರ್ಶದಲಿ ಹೊಳೆದ ರತ್ನ
ಎಂದಿಗೋ ಒಂದು ಗಳಿಗೆಯನಲ್ಲಿ ಕಳೆಯಲಿಕೆ
ಚೆಂದೂರಿನೊಡೆಯು ಬರುವ

ಎಂದರಮನೆಯ ತೋರಣದಬಳಿಯ ತೋರಣದಿ
ನಿಂದುವಂದಿಸಲು ಕೈಯೆತ್ತಿ ಇರುವ—
ಹೊಸಯುಗದ ಹಸುಳಿಬಂಟರಸಾಲ ಕಂಡೆ
ಹಸೆಯಿಂದಲೇ ಕರೆದೊಸಗೆಯೊಂದವಳ ಬೆಳಗುಮುದ್ದನುಂಡೆ

## ಹೆಜ್ಜೆ.

ಒಂದೊಂದು ಚೆಲುವಿನೊಂದೊಂದುನೋಟ
ಈ ಕಣ್ಣು ಪರೆಯ ಹರಿದು
ಮಿಡಿಯುವದು ನಾಡಿ ಹೆಜ್ಜೆಹೆಜ್ಜೆ ನೋಡಿ
ಹಂತೆಲ್ಲ ಮೂಲಹಿರಿದು.
ರಸಗಂಧಸ್ಪರ್ಶ — ಈ ಎಲ್ಲಹರ್ಷ
ಗಳಿಗೆದೆಯ, ಮನವಬಿಚ್ಚು
ಹೆಜ್ಜೆಹೆಜ್ಜೆ ಬಾಳಿದಂತೆಲ್ಲಬಾಳು
ಮೆಚ್ಚಾಗಿ ದೇವನಚ್ಚು!

# ಎದೆಯುಲಿ

ಕನಸಿನಲಿ ಗೆಜ್ಜೆಮಂಜುಳದನಿಯು ಕೇಳಿದೆನು
ಅನಿಸಿತೀಪೂರಿನಲಿ ನಿನ್ನಹೆಜ್ಜೆ
ದಿನವಲೊಂದಾಕಳಿಕೆ ಜೊಂಪುಬಂದಾವರಿಸೆ
ನೆನೆದೆ ನಿನಗಾಗ ತುಪ್ಪಳದ ಸೆಜ್ಜೆ.
ಇಂದೇಕೊ ಸುಮ್ಮಸುಮ್ಮನೆ ಉದುರಿಕಣ್ಣೀರು
ಬಂದೆನೊಮ್ಮೆಲೆ ಜನುಮದೀಚೆಹಾರಿ
ನೊಂದ ಕಾರಣವೇನು ಹೇಳು ಹೇಳಿಲೆರಾಣಿ
"ಕೊಂದು ನಡೆಯಿರಿ ಅಪ್ಪಿ ಕೊನೆಯಸಾರಿ.
ನನ್ನ ಮುಂದಕೆ ಕಳುಹಿ ಬಾಳಬಹುದೆ?
ಚೆನ್ನ ನಾನಿಂತ ಕಹಿ ತಾಳಬಹುದೆ?"

× × × ×

ಹಳೆಯ ಜನುಮದ 'ಅವಳ' ಗಳಕೆಬಿದ್ದೆ
— ಬಳಿಗೆ ಮಲಗಿದ 'ಇವಳ' ಗೆಂತನಿದ್ದೆ!

# ಸಂತೆ.

ಹೇಗೆ ಮೆಕ್ಕೆಯಹಣ್ಣು?
(ಎಂತಾ ಕುಕ್ಕುವ ಕಣ್ಣು!)
ಹೇಗೆ ಹುಡುಗಿ ಬೆಣ್ಣೆ?
(ಆಹಹ ತುಂಬುಕೆನ್ನೆ!)
ಎಳೆಯದೇನು ತೊಂಡೆ?
(ಎಂದಿಗಿವನು ಕಂಡೆ?)
ದುಡ್ಡಿಗೆಷ್ಟು ಸೇರು?
(ಹಾಲಿನೆರಡು ಮೇರು!)
ಉಂಟೆ ಚಪ್ಪರಬದನೆ?
(ನೋಡಿ ನೋಡಿ ಆದನೆ
ಕಿಸೆಯಲಿರದೆಕಾಸು
ಸಂತೆಯಾಸುಪಾಸು
ಅಲೆದು ಕಲೆದು ಬಂದೆ
ಮನೆಯುತುಂಬಿತೆಂದೆ!)

# ವಜ್ರ-ಹವಳ-ಮುತ್ತು.

ಗುಜ್ಜರೋಣಿಯಲಿ ರಾಣಿ ಜೋಡಿಯಲಿ
ತಿರುಗಿ ತಿರುಗಿ ಬಂದೆ
ವಜ್ರ ಹವಳದಾಸೆಗಳನವಳಸೋ–
ಟದಲಿ ಬಡವ ಕಂಡೆ.
ಮನೆಯ ಸೇರಿ ವೈಮುಡಿಯ ಸವರಿ
ಸಂತೈಸಿ "ಎಂತ ಮಳ್ಳು!
ಹೂಮೆದುವು ವೈಗೆ ವಜ್ರವನು ತರಲಿ?
ಅದು ತರಳೆ ಬಿರುಸುಗಲ್ಲು.
ಹವಳವೆನ್ನುವೆಯ? ಕಡಲಿನಾಳದಲಿ
ಹುಳದ ಗೂಡು ಹವಳ
ಅದನು ಹಳಿಯುವನು ನೋಡು ಕನ್ನಡಿಯ
ತಿಂದು ಒಂದು ಕವಳ.
ಮುತ್ತು ಬಹಳ...ಓ ಇಲ್ಲ...ಮರತೆ
ಮುತ್ತುಗಳಿಗೇನು ಕೊರತೆ?
ತಗೊ ತುಂಬ ಮುತ್ತು—ಸೊಗ ಬದಲಿಸಿತ್ತು
ಸೆಲೆಯೂರಿದಾಸೆ ಯೊರತೆ!

## ಕಣ್ಣಿನಳತೆಗೆನಿಲ್ಲು.

ನೀನಿರದಿರೆ ಹಾಡಿನ ಬಣ್ಣದನೊರೆ—
ಶಬ್ದವೊತ್ತಿ ಬಂದು
ನನ್ನನು ತಿಣಕಾಡಿಸಿದವು ಸುಮ್ಮನೆ
ಪೂರ್ಣಕಾವ್ಯಕೆಂದು
ಸನಿಯದಿ ನೀನಿರೆ
ಆಹಾಡಿನತೆರೆ
ನನ್ನೆದೆಯೇರಿದವು
ನಿನ್ನನು ಕಂಡು ಶಬ್ದದ ದಂಡು
ಎಲ್ಲೋ ಹಾರಿದವು.
ಅಂತೂಇಂತೂ ಇಡೀಹಾಡೇ ಇಲ್ಲ
ಅಂತೆಯೆ ಗೆಳತಿ ಕಣ್ಣಳತೆಗೆ ನಿಲ್ಲು!

# ಆಲ.

ನೋಡು ನಮಗೆ ನೆಳಲ ನೀವ
ಆಲದಮರವೊಂದಿದೆ
ಮಾಯೆತುರುಬು ಬಿಚ್ಚಿದಂತೆ
ಬೀಣಬೀಸಿ ನಿಂದಿದೆ.
ಶಬ್ದದಾಚೆ ಶಬ್ದಹೊತ್ತು
ಬಳಲಿ ಗಾಳಿಯೊರಗಿದೆ
ಕಂಪುಸಿಗದೆ ಬಿಸಿಲಹೊತ್ತು
ತಂಪುತೀರಿ ಸೊರಗಿದೆ.
ಹಾದಿಕಾರರಿಳಿದು ಬಳಲಿ
ಕೆಗಳ ಕಳೆದಗುರುತಿದೆ
ಇಲ್ಲಿ ಮುಳ್ಳು ಇಲ್ಲವೆಂದು
ಹಸಿರೆಮಾಸಿ ಬರೆದಿದೆ.
ಮೇಲೆಕುಳಿತು ಹಕ್ಕಿಬಳಗ
ಪ್ರೇಮವೇದ ನುಡಿವವು
ಕೆಳಗೆ ಹುತ್ತದಲ್ಲಿ ಹಾವು
ವಿಷದ ,ಹಲ್ಲು ಕಡಿದವು.

ಹುತದಿಂದ ದೂರವುಲಗಿ
ಪಯಣ ದಣಿವ ನೀಗುವ
ಬಿಸಿಲು ಬಾಡೆ ನವ್ಮ್ರದಾರಿ
ಯಲ್ಲಿ ಮುಂದೆ ಸಾಗುವ.

# ನೀ ಬರುವಿಯೆಂದು.

ನೀ ಬರುವಿಯೆಂದು ಮನೆ
ಸಿಂಗರಿಸಿ ಬಾಗಿಲಲಿ ಕಾದುನಿಂತೆ
ಬರಲಿಲ್ಲ: ಮಸಣವೆನೆ
ಮನೆಯಾಗಿ ಕುದಿಯೇರಿತೆದೆಯ ಚಿಂತೆ
ಹೂಮಾಲೆಗಳ ಹರಿದು
ದೀಪನೊಂದಿಸಿ ನೆಲಕೆ ಕರುಳನೆಳೆದೆ
ಕಾರಿರುಳು ನೀರವತೆ
ಯಲಿ ನಮ್ಮೊಲುಮೆಯಾಳ
ಕೋಡಿಕಂಬನಿಯಲಿಳಿದೆ
ನಾನೆಂತಪಾಪಿಯೋ...
ಯಾರದಾಮೂಲೆಯಲಿ ಮೌನದಲ್ಲಿ?
ಅಹಹ ನೀನೇ?
ಯಾಕೆ ನಗೆ?
ಸಾಕೆನಗೆ ನೀಡು ಕ್ಷಮೆ
ನಾನೆಂತ ಹುಚ್ಚಿ ಮಳ್ಳಿ!

## ನೀನೊಲಿದು ಹಗೆಯುವದೆ?

ನೀನೊಲಿದು ಹಗೆಯುವದೆ
ಪಾತಾಳಕೊಗೆಯುವದೆ
ನನ್ನನೆದೆಪೀಠದಿಂದ?
ನನ್ನಬದುಕಿಸಿದನಗೆ
ಚಿನ್ನದೊರೆಯಾಗುವುದೆ
ಹುಳಿತಿತ್ತೇ ಬೇಟದಂದ?
ದಯೆಯು ಹಿಂದೆಯೆ ಶಾಪ
ವಿರಲೇತಕಾವೋಪ–
ರಾದೆವೋ ತಿಳಿಯಲಾರೆ.
ಅಂದೆನ್ನ ನುಳಿಸಿದ್ದೈ
ಇಂದು ಮರೆತಳಿಸುವ್ವೈ
ನಿನ್ನ ಬಗೆಯಿಂತಿರಲು ಹಳಿಯೆನೀರೆ
ಹೀದು ಹಗೆಯುವ ಬಗೆಯೊಳೊಂದಿದು ಕಾವು
ಒಲಿದು ಹಗೆದರೆ ಕರುಳ ಕೊರೆಕೊರೆವೆ ಸಾವು.

## ಕಾಗೆ-ಜೋಡಿ.

ಬಿಸಿಬಿಸಿಯುಸುರಿನ ಬೇಸಿಗೆ ಹಗಲಲಿ
ಮಸಣದ ಬಳಿಗಿನ ಬೋಳ್ಮರದಹೆಗಲಲಿ
ಚುಂಚುಚುಂಚಿಗೆಚಾಚಿ
ಕಾಗೆಯು ಜೋಡಿ
ಕುಳಿತುದ ನೋಡಿ
ಮೋಡದ ತುಂಡುಗಳು ತಮ್ಮೊಳಗೆ ನಾಚಿ
ಬೆಸೆದು ಮೈಗೂಡಿ
ಕಣ್ ಚಿವುಟಿ ಕಚಕುಳಿಸಿ ಕರೆದವು ಜೋಡಿ
ಮಸಣದ ಸನಿಯದ ಬೋಳ್ಮರ ಚಿಗಿತಿತು
ಹೊಸಬಾಳ ನಕ್ಕಿತು ಗುಟ್ಟುಗಳನರಿತು.

— ೩೯ —

# ಸೌಂದರ್ಯರಾಣಿ ಮತ್ತು ಯಂತ್ರ.

ಮುಂದೆ ಸೌಂದರ್ಯರಾಣಿ
ಹೆಜ್ಜೆ ಹಸಿರಮೇಲ ತೇಲ
ಸಾಗೆ ಬದಿಯು ಬಳ್ಳಿಯುರಳಿ
ಹೂವ ಹಾಸಿತು
ಹಿಂದ ಯಂತ್ರದೆನಿತ್ತೂಗಾಲಿ
ಚೆನ್ನಬಿಟ್ಟು ಬಂದಿತುರುಳಿ
ಹುಲ್ಲುಹೂವು ನೆತ್ತರಾಗಿ
ಚಿತ್ತ ಹೇಸಿತು.
ಬದಿಗೆ ಬದುಕಿ ನಗುವ ಹೂವ
ನೆತ್ತಿ ಮೂಸಿ ಮನದ ನೋವ
ಮಾಯಿಸುತಿರಲೊಳಗದಾವ
ಬೆಳಕು ಬಿದ್ದಿತು!
ಆ ಹೂವಿನುಸಿರಿನಿಂದ
ಜೀವವೆದ್ದಿತು.

# ನನ್ನವಳು.

ನನ್ನವಳ ಸೂಜಿಗೆಲಸದ ಹಸುವ ದುರುದುರಿಸಿ
ಸಹಜದಲಿ. ಹುಲಿಯೆಂತ ಹೇಳಬಹುದು
ಅವಳ ಹಾಡನು ಕೇಳಿ ಹಿಟ್ಲರನ ಪಡೆಯೆಚ್ಚ-
ರೇತಪ್ಪಿ ಬೀಳಬಹುದು.
ಅವಳ ಮೊಗ ನಿಜವಾಗಿ ಕಲೆಯುಸಾಲೆ
ಅವಳಿನ್ನ ಕಾವ್ಯದೇವತೆಯೆಂದಮೇಲೆ
ತಿಳಕೊ ನಾನೆಂತ ಕವಿಸಾರ್ವಭೌಮ
ಒಲುಮೆಗಿಸಿಸಿಲ್ಲವಲ ನೇಮುಗಾಮು!

## ಸಾಲ.

ಓ ನೋವಿನಲಿ ಸತ್ತೆಯೆಂದೊರಲಿ ನಾನತ್ತೆ
ಬದುಕಿಸಲು ನೀನೊಂದು ಮುದ್ದನಿತ್ತೆ
ಚೇತರಿಸಿ ಸಾಲವನು ತಿರುಗಿ ತುಟಿಗಳಲಿಟ್ಟೆ
"ದಾನವನು ಮರಳಿ ನಾನೆಂದೆಂದು ಮುಟ್ಟೆ"
ಯೆಂದುಸುರಿ ಕೊಟ್ಟೆ
"ನಾನು ಹಾರವ ಪಿಳ್ಳೆಯಲ್ಲ ದಾನವ ಕೊಳ್ಳೆ"
ಯೆಂದಲ್ಲಿ ಚೆಲ್ಲಿಹೋದೆ
"ಲೇಸು ತೀರಿಸಿ ಸಾಲವನು ಚಕ್ರಬಡ್ಡಿಯಲಿ"
ಸ್ವೀಕರಿಸೆಸಿದ್ಧಳಾದೆ !

## ಮಗುವಿನ ಸಿದ್ಧಾಂತ.

ಎದೆಗೆ ಅಪ್ಪಿ
ಪ್ರೀತಿಲಿ ಪಪ್ಪಿ
ಕೊಡತಾಳವ್ವ. ನನಗೆ
ಕೊಡತಾಳವ್ವ. ಅದಕೇ
ಅವಳು ಅವ್ವ. ನನಗೆ
ಅವಳು ಅವ್ವ.

ಎದೆಗೆ ಅಪ್ಪಿ
ಪ್ರೀತಿಲಿ ಪಪ್ಪಿ
ಕೊಡತಾನಪ್ಪ. ಅವ್ವಗೆ
ಕೊಡತಾನಪ್ಪ. ಅದಕೇ
ಅಪ್ಪನು ಅವ್ವ. ಅವ್ವಗೆ
ಅಪ್ಪನು ಅವ್ವ.

## ಸಂಶಯ.

"ಜಗದ ಹೆಂಗಳನೆಲ್ಲ ತಾಯಂತೆ ಕಾಣುವದು
ತಿಳಿಯಿತೇ ನಿನಗೆ ಮಗುವೆ?"
"ಲೇಸು...ತುಸುತಡೆ ಗುರುವೆ ಮನದಿ ಸಂಶಯವಿಹುದು
ತಂದೆಯನು ಕೇಳಿ ಬರುವೆ."

## ಬಿಕ್ಷೆ.

ಬಿಕ್ಷುಕನು ಬಾಗಿಲಿಗೆ ಬಂದು ದಣಿಯಾಯೆಂದು
ಕೂಗೆ ರೇಗುತ ಮುಚ್ಚಿಬಿತ್ತು ಕದವು.
'ಬಿಕ್ಷುಕಿಯು' ಬಾಗಿಲೆಬಂದು ಇನಿಯಾಯೆಂದು
ಕುಕಿಲೆವೊಳಗಡೆ ಹೆಚ್ಚಿದತ್ತು ಮುದವು
ಕರೆಪೊಳಗೆ 'ಬಿಕ್ಷುಕಿಯ' ಬೇಡಿದನು ದಣಿಯು
ಮುಂದೆ ಕೇಳಿಸಲಿಲ್ಲವವರ ದನಿಯು.

## ಮದುವೆ. (ಹಳೆ)

ಅವನ ಅವಳ ತಾಯಿತಂದೆ
ಜಾತಕ ಮುಂದಿಜೋಯಿಸ
ಸೇರಿ ಸುರಿಯಲೆಳಸಿದರೋ
ಅವರ ಮದುವೆ ಪಾಯಸ
ವರದಕ್ಷಿಣೆ ಹಿರಿಬಳುವರಿ
ಆ ಮುಹೂರ್ತ ನಿಶ್ಚಯು
ಮನಸು ಮುರಿದು ಹರಿವರಾರು
ಇವರು ಹಣ್ಣಿದಿಚ್ಛೆಯ?
ಮದುವೆಯಾಗಿ ತಿಂಗಳಾರು
ಮಡದಿ ಹೀಗೆಹಾಯಲು
ಈಗ ಹೋದ ಹೆಣ್ಣಾದಾರು?
ಕೇಳಿದನೋ ತಾಯನು.

## ಮದುವೆ. (ಹೊಸತು)

ಸಂಜೆಯ ಗಾಳಿವಿಹಾರಕೆ ಹೊರಟರು
ರಾಯರು ಬಲುಹಗುರ
ಸಾಗಿರೆ ದಾರಿಯಲಾವಳ ಜೋಡಿಗೆ
ಬಲಗೈಯಲಿ ಮಗುವ—
ಹಿಡಿದೆದುರಿಗೆ ಮಗಬರುತಿಹ? ದಗದಗ
ವಾಯಿತು ಮುದುಕನೆದೆ
"ಕೈಮುಗಿಮಾವಗೆ. ಅಜ್ಜನ ಕಾಲಿಗೆ
ಬೀಳೋ" ಯೆನ್ನುವುದೆ?

# ಸೀರೆ.

ಓರ್ವ ಪತಿವ್ರತೆ-ನೀರೆ
ನೀಲಿಯು ಸೀರೆ—
ಯುಲಿಶೋಭಿಸಿದಳು ಸಂಜೆ
ಅವಳಾ ಸೀರೆಯು ಸಿರಿಯು
ಬಡವನು ನಾ ಹರೆಯು—
ದೆಸಕದಿ ದಿಟ್ಟಿಸಿ ಕಂಡೆ
ನೋಡುವ ನನ್ನ ಬಗೆಯು
ಹಳಿವಳು "ನೀ ಹದಿಬದೆಯು
ದುರುದುರಿಸುವದು ಸರಿಯಾ?"
ನೋಡುತ ನೋಡುತ ನಿಂದೆ—ನಸು
ನಗುತವಳಿಗೆ ನಾನೆಂದೆ
"ಇಂತಹ ಸೀರೆಯು ಲವಳ
ಸಿಂಗರಿಸಿದರಾನೆರಳ
ಹೋಲುವ ಸೌಂದರ್ಯ—ನಿನ
ಗಿರದೆಂಬುದನರಿಯಾ?

ನನಗೇತಕೆ ನಿನ್ನೀಬೆಡಗಿನ ಗೊಡವಿ
ನನಗಿಹ ಬಡವಿ—
ಗೀಸೀರೆಯು ತೊಡಿಸಿದೆ ಮನದಲೆ
ಏ ಪರಪುರುಷನ ಮಡದಿ."

## ನಿನ್ನವಳು.

ಗೆಳೆಯ ನಿನ್ನವಳಿಂದು ಬಂದು ಕಾಣಿಕೆಯೊಂದು
ನಿನಗಾಗಿರಿಸಿ ಹೋದಳಿದೊ ನಲುವೆಯೋಲೆ
ಸ್ವೀಕರಿಸು: ನನ್ನ ಕಿರಿಯುಪಕಾರವನು ಸ್ಮರಿಸು
ನಿನಗಾಗಿ ನಾ ಸ್ವಾಗತಿಸಿದೆ ಬಾಲೆ.
ಗೆಳೆಯ ನಿನ್ನವಳಿಲ್ಲಿಬರೆ ನೀಡಿದೆನು ಮಲ್ಲಿ
ಗೆಯ ದಂಡೆಯನು ಮುಡಿಗೆ ನಿನ್ನ ನೆನೆದು
ಸತ್ಕಾರ ಸಾಲದೆಯೆ ತುಟಿಯುಲೆನ್ನನು ಗುದ್ದಿ
ನಡೆದಳಾದಿಂಡೆ ಕಡುಮುಳಿದು ಮುನಿದು.

# ವಧೂಪರೀಕ್ಷೆ.

ಹೆಣ್ಣನೋಡೋಣಂತ ಜೋಯಿಸರ ಮಗ ಬಂದ
ಅತಿಥಿಗಿತ್ತನು ಹೆಗಡೆ ಹಾಲುಹಣ್ಣು.
ಕಿಡಕಿಬಾಗಿಲಸಂದಿಗಳನು ಬಳಸಿತು ನಮ್ಮ
ಜೋಯಿಸರ ಮಗನ ಕಣ್ಣು
"ಒಳಿತೆ ಮನೆಕಡೆಗೆಲ್ಲ?... ನಿಮ್ಮಮದುವೆಯದೆಂದು?
ಬರುವ ಹುಣ್ಣಿವೆಗೆಮ್ಮ ಮಗಳ ಮದುವೆ
ತಪ್ಪದೆಯೆ ಬರಬೇಕು ತೆಗೆದುಕೊಳ್ಳಿರಷ್ಟೆಯು"
ಬೆವತು ಮರಳಿದ ಮನೆಗೆ ಗಂಡುವಿಧವೆ!

## ರುದ್ರಗೀತೆಯ ಕವಿ.

ಕತ್ತಿಮಸೆ ಮುನ್ನಗ್ಗ
ಕತ್ತನರಿಚೆಲ್ಲಿ
ಸತ್ತುಬಿದ್ದರು ಒಗ್ಗ
ಬಿಡುಗಡೆಯು ಗೆಲ್ಲು
ಅಗೊ ಬಂತು
ಬಿರುಗಾಳಿ
ವೊಲುಧಾಳಿ-ದಂಡು
ಅದಕಾಲ-
ಡಿಯುಜಂತು
ವಂತೆ ತಿವಿಗಂಡು-
— ಎಂದು ಕವಿ
ಕೋಣೆಯಲಿ
ಶಬ್ದಗಳ ಗುಂಡು
ಸುರಿಯುತಿರೆ
ಹೊರಗೇನು
ಚಟಪಟದ ಸದ್ದು?

— ೫೨ —

ಕವಿಯೆದೆಯು
ಟುಕುಟುಕಿಸಿ
ಹಾಸಿನಲಿ ಬಿದ್ದು
ಬೆವರಿನಲಿಯುದ್ದು
ಬವಳಿ ಬರು
ವುದೆ ಬಾಕಿ
ಆಗೊ ಮುಗು

\+ + +

ಪಟಾಕಿ!

## ಚೆಂದಹೆಂಡತಿಗಂಡ.

ಹೆಂಡತಿಯೊಡನೆ
ಮಾವನಮನೆಗೆ
ಹೋಗಲೆಂತಲೇ ಬಂದ
ಚೆಂದಹೆಂಡತಿಗಂಡ
ಮೋಟರನೇರಿ
ಬಳಿಯಲಿನಾರಿ
ಅಡಗಿಸಿ ಕುಳಿತುಕೊಂಡ
ಚೆಂದಹೆಂಡತಿಗಂಡ
ಎಲ್ಲಾ ಕಣ್ಣಲೂ
ಇದೇ ಹೆಣ್ಣಿರಲು
ಒಳಗೆ ಹಲ್ಲನುತಿಂದ
ಚೆಂದಹೆಂಡತಿಗಂಡ
"ಮೋಟರಿನಲ್ಲಿ ಜನಾ ಬಹಳಾ
ಚಕಡಿಗೆ ಸುಕವಾಗಿ ಏಳಾ"
ಹೆಂಡತಿ ಕಿವಿಯಲಿ ಅಂದ
ಚೆಂದಹೆಂಡತಿಗಂಡ!

# ಮಲೇರಿಯಾಮುದ್ದು.

ನಿನ್ನೆ ಬೆಳಗುಜಾವದಲಿ ಸವಿಯ ಕನಸೊಂದ ನಾನು ಕಂಡೆ
ಬಹಳ ದಿನದ ಮುದ್ದುಗಳನೆಲ್ಲ ಸುರಿಸುರಿದು ಮೊಗಕೆದಿಂಡೆ
ಕಾಡಿಕಾಡಿದಳು ಗಾಯಮಾಡಿದಳು ಗಲ್ಲಕೆನ್ನೆಕಚ್ಚಿ
ಬೈಯ್ದು ಜರೆದೆ ನಾ ಹೊಯ್ದು: ಕಂದೆರೆದೆ
ಕೊಂಡಿಯಾರಿ ಚುಚ್ಚಿ
ಸತ್ತುಬಿದ್ದಿಹುದು ನನ್ನ ಕೆನ್ನೆಯಲಿ ಮುದ್ದನಿತ್ತ ಸೊಳ್ಳೆ
ಮತ್ತೆಮುಸುಕನಾನೆಳೆದುಕೊಂಡೆ
ಹಂಬಲಿಸಿ ಕಂಡೆ
ಆ ಕನಸು–ದಿಂಡೆ
ಯನು. ಜೇನು–ಜಾವ ಒಳ್ಳೆ!

— ೫೭ —

## 'ನಾಡೋಜಪಂಪ'

ಪಂಪಕವಿಯು ಮತ್ತೆ ಹುಟ್ಟಿ
ಕನ್ನಡವನು ಕಲಿತನು
ಬಿ. ಎ. ಗಾಗಿ ಕುಳಿತನು
'ಪಂಪಭಾರತ' ಪುರಾಣ
-ಗಳಿನ ಪ್ರಶ್ನಪತ್ರ ಬಾಣ-
ದಂತೆ ಮುಟ್ಟಿ
ಬಹಳಗಟ್ಟಿ-
ಯಾಗಿ ಪ್ರಶ್ನೆಹಳಿದನು.
"ನನ್ನ 'ನಾಡೋಜಪಂಪ'
ವೋದಬಲ್ಲವೇನೊ ಗಾಂಪ?"
ಎಂದ ಬಳಿಯ 'ಮುಳಿಯ'ನು!

# ಆತ — ಆಕೆ.

ಆತ:—

ಗಂಡುಮಗು
ಹುಟ್ಟಿದರೆ
ಲಂಡನಿಗೂ
ಕಳುಹುವೆ.
ದೊಡ್ಡವನ
ಮಾಡಿಜನ
ಹೊಗಳುವದ
ನೋಡುವೆ.

ಆಕೆ:—

ಹೆಣ್ಣುಮಗು
ಹುಟ್ಟಿದರೆ
ಚೆನ್ನಮ್ಮಗೂ
ಹೆಚ್ಚಿನ
ರಾಣಿಯನು
ಮಾಡುವೆನು
ನಾಡವರ
ಮೆಚ್ಚಿನ.

ಆತ:—

ನಾಡಿನಲಿ
ವೀರ, ಕಲಿ
ಯಾಗುವನು
ತಾಗುವನು ವೈರಿಯ

ಆಕೆ:—

ಕಣ್ಣಿನಲೇ
ಹೆಣ್ಣುಸಲೆ
ಗೆದಿಯುವದ
ನರಿಯೆಯೊ?

| ಆತ: — | ಆಕೆ: — |
|---|---|
| ಆದರಿಕೋ | ವಚನತಕೋ |
| ಮೊದಲುಮಗ | ಮೊದಲಮಗು |
| ಬಂದುನೊಗ | ಹೆಣ್ಣನಗು |
| ಹರಿವನು | ಸುರಿವಳು |
| ಆತ: — | ಆಕೆ: — |
| ಯಾತಕಿದು | ಕೇಳುವುದೇ? |
| ಮಾತು? ಮುದು- | ನಾಳೆ ಇದೇ |
| ಮೆಯನು ಯೊಂದಾಗುವ? | ಗಳಿಗೆಯೊಲ್ಲಾಗುವ! |

— ೬೦ —

## ಚಿಕ್ಕಪುಟ್ಟ…

ಚಿಕ್ಕಪುಟ್ಟ ತಾಯ್‌ತಂದೆ ಮಕ್ಕಳುಗಳು
ಪುಕ್ಕತಂದೆ ಕುರಿತಾಯಿ ಹೆತ್ತಿರುವ
ಹುಟ್ಟಿದೊಡನೆ –ಭಲೆ-ಹೆಚ್ಚುಸತ್ತಿರುವ
ಆಹ! ಹೆಗ್ಗಣಗಳು!
ಏನುಮಾಟ ಶಿವ
ಡುಮ್ಮಿಡುಮ್ಮಿ ಹೊಟ್ಟೆ
ಕಾಲು ಕಿಟಕಿಟಕಿ ಕಣ್ಣು ಪಿಳಿಳಿ ಪಿಳಿ
ಎಲುಬು ಚರ್ಮವೊಟ್ಟೆ
ಕೋಟಿಕೋಟಿ ಬಡಕಾಟ ದಂಪತಿಯು
ಮಾಟನಾಡಲೂಟ
ಇದಕೆಲ್ಲ ಸೂಟ? ಇದಕೇನು ಸಾಟಿ?
ಪಾತಾಳಲೋಕ ಪಾಟ
ಪೂರ್ಣದಿಂದ ಸಲೆ ಪೂರ್ಣವೆನ್ನುವರು
ಪೂರ್ಣಕೊಂದು ರಾಗಿ–
ಯಂತರವು ಬೇಕಾಗಿರುವದೆಲೋ
ದೇವ,– ನಿತ್ಯಭೋಗಿ

ಬಸುರಿನಿಂದ ನೆಲಕಿಳಿವ ಮುಂಚೆಯೇ
ಶಿಶುಗಳನ್ನು ನೀನು
ಕರುಣೆಯಿಂದ ಗರ್ಭಿಣಿಗಳಾಗಿಸಿಯೆ
ಕಳುಹಿಕೊಡುವಿಯೇನು?

# ಪ್ರಭಾತವರ್ಣನೆ.

ಭಂಗಿಗಳೆದ್ದು ರಾಜಪಥಮಂ ಗುಡಿಸಲ್ಕೆ ಕಡಂಗಿಪೋಗೆ ಚಾ-
ದಂಗಡಿಯಿಂದೆ ಕಂಪುಹೊಗೆಯೇರುವುದುವಿಪ್ರಗೆ ಬೀದಿಯಂ
ಚಿನೊಳ್
ತಂಗಿದ ಕುಂಟಮೂಕಕುರುಡರ್ ತಿಳಿದೇಳುತೆ ಪೊಟ್ಟೆವಾ
ರಿಗಳಂ
ಭಂಗಿಸಿ ಚಿಂದಿಯೊಳ್ ತುರುಕಿ ನಿತ್ಯದ ಪಾಡಿಗೆ ಪೋಗು
ತಿರ್ದಪರ್.

ಕಾಗೆಗಳಿವು ನಾಯಿಗಳಿವು
ಸಾಗುವ ನಿರ್ಗತಿಕರಿವರು ರಾಜನಪುಣ್ಯಂ
ಕೂಗುತಲಿವರೆಂತಾದರು
ನೀಗಿಸುವಯೀ ಪ್ರಭಾತದೊಡಲೊಂದುರಿಯಂ?

ಮತ್ತಮಾಪ್ರಭಾತಸಮಯದೊಳ್—
ಪಾಶಿಗೆ ಕೊಡದಿಹ ಚಳವಳಿ
ಪೋಕರಿಗಳ ಹೇರಿಕೊಂಡು ಕರ್ಮಕ್ಕಯ್ತರ್॥
ಪಾಪವನೆಸಗಿದ ಮನುಜಗೆ
ಪೋಲೀಸನವಶವು ತಪ್ಪುವುದೆ ಭಾರತದೊಳ್॥

ಇಂತಪ್ಪ ಪ್ರಭಾತಪ್ರವಾಳಪ್ರಭಾಪ್ರವಾಹದೊಳ್
ಬೀದಿಯಂ ಗುಡಿಸುವಬಿರನಂ ರಾಯರ
ಕಾರು ಪರಿಗಣಿಸದೆಪಾರಿಪ್ಪೋಗೆ —
ಕಸವನೆಯ್ದು ಚೆಲ್ಲುತುಂ
ಮಸೆದ ಕೋಪ ಮೆಲ್ಲುತುಂ
ದೇವನಡಿಯ ಶಪಿಸುತುಂ
ನಾವಕರೆಯುತ ಯಿದ್ದಂ
ಚಂಡರಶ್ಮಿಯಿಂದನೋಡನೋಡುತಾಯೇರಿಬರುತಿದಾನೆ
"ಕಂಡುಕಂಡು ಕೈಸಾಗದಿರುವದೊ"ಯೆಂದು ಒರಲುತಾನೆ.

# ನ — ನ್ನಿ — ಝಂ

ಆಯಿಝಂ ಈಯಿಝಂ
ನನ್ನಿಝಮನು ತಪ್ಪಲಾರೆ
ನಿನ್ನೀಝಮಿಗೆ ಒಪ್ಪಲಾರೆ
— ಚಪ್ಪರಿಸುವುದೋ ಭುಜಂ
ಮನುಜಪ್ರಾಣಿನೇಯ್ದಿತೆಂತ
ಕೃತ್ರಿಮತೆಯ ಗಜಬಜಂ
ಗಾಳಿಬೆಳಕು ನೀರಿನಂತೆ
ಜೀವಿಗೊಂದೆ ಸಹಜಂ
ಅದುವೆ ಶುದ್ಧ ನನ್ನಿ-ಝಂ
ನೋಡು ಕಿಲುಬು ಪೂಸುತಿದೆ
ಜೀವಿಗಳನು; ಮಾಸುತಿದೆ
ಹುಟ್ಟಿ ನಲಿಹ ಶಿಶುದೈವಕೆ
ತೂರಿಬಂದು ವ್ಯತ್ಯಯಜಂ
ನನ್ನಿಝಂ ನನ್ನಿಝಂ
ತುದಿಮೊದಲಿಗಿದೇ ನಿಜಂ

## ಬೆಣ್ಣೆ – ಬಾಂಬು.

ಗರಿಯಮೇಲೆ ತೊಟಕಿದಂತೆ
ಬಿಸಿಲು ಮಳೆಯ ಹನಿ
ಬೆಣ್ಣೆ–ಬಾಂಬು ಭೂಮಿಗುದುರಿ
ಸುತ್ತಣೆಲರು ತನಿ
ಗೋಡೆಗೋಡೆಗೆಲ್ಲಬೆಣ್ಣೆ
ಬೀದಿಗೆಲ್ಲ ಕೆನೆ
ಕೊಳ್ಳಕೊರಕಲಿನಲಿ ಹಾಲು
ಹಾಳು ಹೊಲದಿ ತೆನೆ!
ಯುದ್ಧಕೆಂದು ಸಿದ್ಧವಾದ
ಭಟರ ತಂಡವು
ಕದನವೆಂದು ಬಗೆದು ಹಗೆಯ
ಎದೆಗೆ ಕೊಂಡವು!
ಬಿರುಸುಮಾತ ಮರೆತು ಜನರ
ಸೋತನಾಲಿಗೆ
ಈಲೋಕ ನಾಕವಾಯಿ
ತವರ ಪಾಲಿಗೆ

ಭೃಂಗ— ಬೆನ್ನನೇರಿ ಬಾಂಬ
ತೂರಿಕಲ್ಪನೆ
ಮರಳಿ ಸೇರಿತದರ ತಿಂಗ-
ಳೂರನಿಲ್ಮನೆ!

## ಹೆಸರು.

ಯಾರೊ ಯೆಂದೂ ಯೇಕೊ ಯೆಲ್ಲೊ
ಮೂರೊ ಏಳೊ ಸಾಲೊ ಸೊಲ್ಲೊ
ಹಾಡೆ ಮೆಲ್ಲಗೆ
ಅರಳಿ ಕಂಪಿನೆಲರ ಸೂಸಿ
ಬಾನಮಲ್ಲಿಗೆ
ಕುಕಿಲಿಸಿತು ದಿಗಂತ
ವಸುನಕ್ಕನನಂತ
ಬರೆಯಲಿಲ್ಲ ನೆಲದ ಭಾಷೆ
ಆದರೆಲ್ಲ ಹೂವಿಗಾಸೆ
ಯಾಗಿಹಾಡನು
ಕುಡಿದು ಗಮಗಮಿಸುತ ಬೆಳಗಿ-
ಸಿದವು ಕಾಡನು
ಅಹಹ ಎಂತ ಕುಶಲಚೋರ
ನೀ ರವೀಂದ್ರ ಟಾಗೋರ!
ಹೂವಿನಿಂದ ಒಂದೊ ಎರಡೊ ಚುಟುಕಕದ್ದನು
ಆಕವಿಗೆ ಸಿಗದ ಹೆಸರನಿವನು ಗೆದ್ದನು!

# ಬಯಕೆ.

ಮೊಸರನುಂಡೇನವ್ವಾ. ಮೊಸರ
ಉಂಡೇನವ್ವಾ. ಒಮ್ಮೆ
ಅಂದಿತ್ತು ಬೀದಿಯ ಮಗು
ಸನಿಯನಿಂತ ಕಾಳಿಮ್ಮೆಗೇತಕೋ
ಕೆಚ್ಚಲಲ್ಲಿಯೇನಗು
"ಬೀಳಬೇಕು ಆ ಮುದ್ದುಬಾಯಿಗೇ
ಎಂಬ ಬಯಕೆ ನನಗೂ
ಹೇಳು ಹಿಂಡಲಿಕೆ ನಿನ್ನ ತಾಯಿಗೆ
ಹೋಗು ಬೇಗನೇ ಮಗೂ"
ಅಂದಿತ್ತು. ಹಾಲು
ಅಂದಿತ್ತು
ಆದರೇನು? ತಾಯ್ ತಂದೆಬಳಗ
ದೀಪಗಳಸಾಲು ನೊಂದಿತ್ತು
ಎಂದೋ ನೊಂದಿತ್ತು
ಎಮ್ಮೆಕೂಗಿ ಕರುಮರಿಯನರಸಿ
ಸೇರಿತ್ತು ಸಂಜೆ ಕೊಟ್ಟಿಗೆ

— ೬೯ —

ಹುಡುಗ ಮೂಗಿನಿಂದಿಳಿವುದೊರಸಿ
ಸಾಗಿದ್ದ ತುತ್ತುಬಿಟ್ಟಿಗೆ
ಬಂದೆ ರಾಗಿ ಕಾಳರಿವಪರಿಸಿ
ದೇನಿಸುತ ನನ್ನಮುಟ್ಟಿಗೆ

## ಬುದ್ಧಿವಂತತಾಯಿ.

ತಿಂಗಳಿರುಳ ಗಾಳಿಹುಯ್ಲು
ಮೈಲುಮೈಲ ದಾಟಿರೈಲು
ಗಾಡಿನುಗ್ಗಿತು.
ಒಳಗೆಕುಳಿತ ಮಗುವು ಹೊರಗೆ
ನೋಡಿ ಹಿಗ್ಗಿತು.
ಎಡಕೆಹಿಂದೆ ಬಲಕೆಮುಂದೆ
ಬಂದು ಆಡುವ
ನೋಡೆಅಮ್ಮ ಚಂದುಮಮ್ಮ
ನನ್ನ ನೋಡುವ
ಕೇಳು, ಬಂದೆ ಬಂದೆನೆಂದು
ಯೇನೊ ಹಾಡುವ.
ಎಂದುಹೇಳಿ ಕೇಕೆಹಾಕಿ
ಮಗುವು ನಲಿಯಿತು
ಮಗುವು ನಲಿಯಿತು.
ಎಡಕೆಹಿಂದೆ ಬಲಕೆಮುಂದೆ
ಚಂದ್ರ ಸುಳಿಯನು

ಎಂದು ತಿಳಿಸಿ ದಿಕ್ಕು ಬದಲಿ
ಸಿರುವ ಹಳಿಯನು
ತಾಯಿ ತೋರೆ ಅಲ್ಲವೆಂದು
ಮಗುವು ಅತ್ತಿತು.
ಕರಿಯಮೋಡಬಂದು ಚಂದ್ರ
ಮನನು ಮುತ್ತಿತು.
ಮೈಲುಮೈಲು ದಾಟಿರೈಲು
ಗಾಡಿ ಯೋಡಿತು.
ನಿದ್ದೆಯಲ್ಲು ಬಿಕ್ಕಿ ಬಿಕ್ಕಿ
ಮಗುವು ತೀಡಿತು.

## ಸೀಳುದಾರಿ. (೧)

ಸೀಳುದಾರಿಯಲ್ಲಿ ಸಿಳ್ಳುಹೊಡೆಯುುತ
ನಡೆದೆ ಮುಂದೆಮುಂದೆ
ಹಾಲುಹರಿಯಿತೋ ಹಳ್ಳಕೊಳ್ಳದಲಿ:
ಚಂದ್ರಬಂದ ಹಿಂದೆ
ಬಿಳಿಯುವೋಡ ಹಂದರದಿ ಹಾದಿ,
ಅದರಲ್ಲಿ ಸೀಳುದಾರಿ
ತಿಳಿಯುದಾದೆ ಕೈವ್ಯೆಯು ಚೇತನವ:
ಬಂತು ಗಂಗೆತಾರಿ
ಹಗುರುಹೆಜ್ಜೆಯಲಿ ಹಾದುಹೋದೆ
ಆ ಮುಗಿಲಹೂವ ಮೂಸಿ
ಸೀಳುದಾರಿಯೋ ಕಾಣದಾಯಿತೋ
ಸುತ್ತುಪಕಳೆಹಾಸಿ
ನನ್ನದಾರಿ ಓ ಸೀಳುದಾರಿಯೊಂದೊದರೆ
ಎದುರು ಅಗಸೆ
ಹೊನ್ನಗಂಬ ಕಳಸಗಳ ಹೊಳಪು!
ಸುರಕನ್ನೆಯೊಳಗೆ ಹೊಗಿಸೆ

“ಸೀಳುದಾರಿ ಸಿಕ್ಕಿತೇ ಸ್ವರ್ಗವನುಹೋಲು
ತಿರುವ ಇಲ್ಲಿ?
“ಮರುಳೆ ಸ್ವರ್ಗವಿದು ರಾಜಬೀದಿಯೆಲ್ಲೆಲ್ಲು:
ಸೀಳುಯೆಲ್ಲಿ?”
“ಇಂತ ಸ್ವರ್ಗದಲಿ ಒಂದು ಜೀವಿಕೇಳಿರುವ
ದಾರಿಯಿಲ್ಲೇ?
ನನಗೇತಕಿಂತ ಬೀರುಬೀದಿ? ಬಿದ್ದಿಹುದು
ದಾರಿಭೂಮಿಯಲ್ಲೇ”
—ಕುಟಿಯಮುಂದೆ ಕಿರುದಾರಿಯಲ್ಲಿ ನಾ
ನೊಂಟಿ ಅಲೆಯುತಿದ್ದೆ
ಜೊನ್ನ ಜೊಂಪಿನಲಿ ಹಸಿರು ತೂಕಡಿಸಿ
ಮುದ್ದಿಸಿತ್ತು ನಿದ್ದೆ.

# ಗಂಡನಳಿದಿಹಕನ್ನೆ

ನೀನು ಮಡಿದಾಪುರುಷ
ನೋಡನೇ ಸುಟ್ಟಿಯುಹರುಷ?
ಈ ಮರಣ ಮೌನ ಸಾಕೇ.
ಗಂಡನಳಿದಿಹಕನ್ನೆ
ಯಾಗೆನ್ನ ಮನದನ್ನೆ
ಪಾಪ, ನರಕವಿಧಿ ಯೇಕೆ?
ಏನು, ಈ ಜನರಭಯ
ತಾಯ್ತಂದೆಭೀತಿ?
ಬಲ್ಲೆ ಜಗ ಪಾಪಮಯ
ವಿಲ್ಲ ಹೊಲೆಜಾತಿ.
ನಿನ್ನಬಾಳ್ ಲೋಕಗಳ
ನುಡಿಯುಸೊತ್ತೇ?
ಜನರಮರೆ: ನೀನಾಗು
ನೀ— ಮುರಳಿ ಮುತ್ತೈ.
ತಲೆವಾಗಿರಲು, ಮುಸುರೆ—
ಜಗಕೆಲ್ಲ ಕೇಳು

ಕಂದೆರೆದು ಬಿಸಿಯುಸುರೆ

ಜನ ದಿಕ್ಕುಪಾಲು

ಗಂಡನಳಿದಿಹಕನ್ನೆ

ಯಾಗೆನ್ನ ಮನದನ್ನೆ

ಈ ಮರಣ ಮೌನಸಾಕೇ

ಇಗೋ ಬಾಚಿದೆನು ಹೆರಳು

ಮೊಗವೆತ್ತಿ ನೀ ಯರಳು. ಇಂತವಳು ವಿಧವೆಯೇಕೆ?

## ಹಳಿಮೆ

ನಿನ್ನ ನೋಡಿತು ಕಣ್ಣು
ಕಲ್ಪನೆಯು ಪೂರ್ತಿಸಿತು ತುಂಬು ಸೊಬಗನ್ನು
ನಿನಗಿಂತ ನಾ ಕಂಡ
ನಿನ್ನ ರೂಪಿರೆ ಹೆಚ್ಚು
ನನ್ನಹಳಿವುದು ದಂಡ ನೀನುಹುಚ್ಚು
ಈ ಬೆಡಗಿ ನೊಂದಣಕ-
ಮೂನನಗೆ ಮೆಚ್ಚು!
ನಿಲ್ಲು ಚಿತ್ರಿಸುವನಕ
ಈ ಮಸಿಯು ಕುಚ್ಚು
ನಿನ್ನೀ ಹಳಿಮೆ
ಮನಸಿನೊಳಗೊಳಗಿನೊಲಿಮೆ!
ಇಳಿದು ನೋಡೊಳಗೊಳಗೆ
ಬರದೆನ್ನ ಬಳಿಗೆ

## ಮಿಂಚು.

ಬೆಳಕಿರದೆ ಕಂಗುರುಡು
ರಸವಿರದೆ ಬರಡು
ಪಶುವಾಗಿ ಮೂಲೆಯಲಿ ಜೋಲುತಿದ್ದೆ
ಆ ದಿನದ ದಯೆಯಿಂದೆ
ಬೆಂಬದಿಗೆ ಬಂದ
ಎಂತನಗೆ! ಬೆಳಕಿನಲಿ ಚೀತರಿಸುತಿದ್ದೆ
ಶ್ರಾವಣದ ಸಂಜೆವೆಳ
ಕಿನ ಹೊಳೆಯುವೀರಿ
ಹಿರಿಯಿತಾ ನಿನ್ನನಗೆ
ಲೇಸೆನಗೆ ಕೋರಿ
ಕತ್ತಲೆಯ ಮಂಕೆಲ್ಲ ತೊಳೆದಾಯ್ತು ಬಿಳಿದು
ಆದರಾ ನಗೆವೆಳಕು ಕೋರಯಿಸುತುಳಿದು,
ಮತ್ತೆಕಾಣದು ನೋಡು ಕಂಗಳೇ ತೆರೆದು
ಹೋದೆಯೆಲೆಮಿಂಚೆ, ಓ ಮಂಗಳೇ ಇರಿದು!

## ದೂರು.

ಅಣಕಿಸುವರು ನೋಡು ಜನ
ತಂದೆ ನಿನ್ನ ಸಿಂಹಾಸನ-
ದಡಿಯು ಬಡಿಯುಲವಳು ನಾನು
ಕುಳಿತುಕೊಂಡರಾಯಿತೇನು?
ಅವರನೆಲ್ಲ ನಿನ್ನ ಬಳಿಗೆ
ಕರೆದುತರುವುದಾಗದೆ
ನಲುಮೆವೆಳಕಿನಲ್ಲಿಗಳಿಗೆ
ಯಿಲ್ಲಿ ಕಳೆಯೆ ಮುಗುದೆ
ನಾನು ಹರೆದು ಬಂದೆವು
ಸಹನೆಯಿಲ್ಲ ಜನರುಗಳಿಗೆ
ನಿನ್ನ ನಮ್ಮ ಚೆಂದವು.
ಅವರ ಮಚ್ಚರವನು ನೋಡು
ತಾಳಲಾರೆ ಕಾಟವ
ಅವರಿಗೊಮ್ಮೆ ಕೈಯು ನೀಡು
ತೋರು ನಿನ್ನ ಪೀಠವ.

ಮೋನವೇಕೆ? ಕರುಣೆ ಹನಿಸಿ
ಕರೆಯಿಸಾಲೋಕವ
— "ಜೀವಜೋಡಿಯೊಂದತಣಿಸಿ
ಹಿಡಿವೆ ಜಗದ ತೂಕವ"

## ಉಯ್ಯಾಲೆ.

ಆಸಾವು ಬರುವನಕ
ಅಳುವಬಾರ ಸನಿಯ ಸಖ
ಮರಣದಾಚೆಗಳಲುನೀಚೆ
ಬಾನಿನವಳು ಬಿಡಳು ಇಕಾ!
ಪೊಕ್ಕಸಾವು ಬರುವ ಮುನ್ನ
ನಕ್ಕು ನಲಿವ ಬಾರ ಚೆನ್ನ
ಜಗದ ಸಿರಿಯ ಮೊಗೆದು ಹಿರಿಯ
ದುಕ್ಕವೆಸಗಿ ಬಿಡುವ ಚೆನ್ನ
— ಗೆಳತಿ ನೀನದೆಂತಹುಚ್ಚಿ
ಅಳುನಗುವನು ಸಹಜನೆಚ್ಚಿ
ಬಾಳುವೆಯ ಹೋಳುವೆಯ?
ತಿಳಿದುನೋಡು ಕಣ್ಣಮುಚ್ಚಿ

## ಕನಸು.

ಓ ಬಾಳಪೂರಕವೇ
ಬಿಡುಗಡೆಯಾಟದ ಬಯಲೇ ಮುದ್ದೇ
ಹನಿಸುತಲಿರು ನಿನ್ನೆದೆ ತನಿಜೊಂಪು
ನೀ ಕೈಬಿಡೆ ಮುಗಿಯಿತು
ಈ ಜೀವಿಯು ತೇಲಾಟ
(ಮೇಲಾಟವದೇತಕೆ ಮರಣದಮುಗು–ನಿದ್ದೆ?)
ನಿನ್ನೈಸಿರಿಯೀನೆಲದಲಿ
ಹುಡಿಹೊಲದಲಿ ಬಿತ್ತದಿರು
ಬಾನಿನವರದೆಂತೆತ್ತಿದರು
ಬಾಳನು ನಿನ್ನಾಸೀಮೆಗೆ ಹೇಳಾ
ಮಣ್ಣನಲೀಜಡವಿಡುವನು
ದೇವನ ಅಂಗೈ ಗೆರಯು,
ಬಾಯೆತ್ತಲು
ಸಾಕೀಬೆಳಕಿನ ಬಿಳಿಗತ್ತಲು.

## ಹುಚ್ಚು ಕನಸು.

ಅಹಹ ಹೊಂಬೆಳಕು ನಗುತ ಗಮಗಮಿಸಿತೆಂತ
ಸವಿಯತಂಪು
ಮಲಗೆ ಕನಸು- ತುಪ್ಪಳದಿ
ಜಿನುಗಿದವು ಸೋನೆಸೋನೆಜಂಪು
ತೋಯುತಿರಲು ಜಾರಿದೆನು
ಕೋರೆತಿಂಗಳೆದೆ ತುಳುಕು ತಳಕೆ
ತೇಲಿ ತೇಲಿ ಸಾಗಿರಲು
ವ್ಯೋಮದಿಂದೆ ಹೊರಗಿನೊಂದು ಝಳಕೆ
ಕೋಟಿಯುಗಂಗಳ ಪಯಣವು
ಫಲಿಸಿತು ನೇಸರು ತಿಂಗಳನು
ತಿಂದು ಸೇರಿದನು ಒಂದುಗೂಡಿದರು
ನೇಸರ ಕಂಗಳನು
ಚಂದಿರ ಚುಂಬಿಸಲವನೂ
ಸೂರ್ಯಮನಾದನು ಮರುನಿಮಿಷ
ಭೂಲೋಕದಿ ಎಲ್ಲವರೂ
ಗಂಡಸರಾದರು ಆದಿವಸ

— ೮೩ —

ರಾಜ್ಯಕಾರಣವು ಮಣ್ಣುಮುಕ್ಕಿ
ಆಮೂಲಮಾತೆಗಾಗಿ
ತಪಕೆ ನಿಂದರೋ ಬಟ್ಟಬಯಲಿನಲಿ
ಕಾಲತನಕಬಾಗಿ

# ಸೌಂದರ್ಯ.

ಸಿರಿಸುಂದರಿಯು ಮಾಳಿಗೆಯ ಬೆಳಗಿ ನೆಲರಪ್ಪೆ
ಮೈನೀಡಿ ನಿಂದಿರಲು ನಾ ನೋಡಿದುದು ತಪ್ಪೆ?
ಬಂದ ದೇವನಮುಂದೆ ಭಕ್ತನಂದದಿ ನಿಂದೆ
ಆಸೊಬಗ ಬರೇಯುವದೆ? ಮಾತೆಲ್ಲ ಬರಿಸಿಪ್ಪೆ!
ಕಣ್ಣಿರುವ ಕಣ್ಗೆ ಹಿಡಿಮಣ್ಣು ಬೇಳೂರಜಂತೆ
ಆ ನೀರೆಗೆನ್ನ ದುರುನೋಟ ಕಹಿಯಾಗಿ (?)
'ತೊಲಗುಶನಿ' ಯೆಂದೇನೊ ಹೇಳಿದಳು ಮೇಲಿಂದ
ತೇಲಿಸಿದೆ ನೀನುಡಿಯ: "ಕವಿಯು ಸೊಬಗಿನಯೋಗಿ
ನಾ ನಿನ್ನನೆಡೆಗೆರಳಿ ಬಯಸಿಲ್ಲ: ನಿನ್ನಂದ
ವನು ಪಸರಿಸಿದ ಮೂಲಸೌಂದರ್ಯ ಕೆಡೆಯಾಂತೆ
ಮಿನುಮಿನುಗುವಾ ನಿನ್ನದೆಂಬ ಕಣ್ಣುಗಳಾಚೆ.
ನಾ ಕಂಡ ಹಿರಿಚೆಲುವ ನಿನ್ನೊಳಗೆ ನೀ ಕಾಣೆ
ನಿನ್ನ ತಬ್ಬಿದಸೊಬಗು ನಿನ್ನದಲ್ಲವೆ ಜಾಣೆ.
ತಿರುಗಿದೆನು ಮೈನಿಮಿರಿ— ಸೌಂದರ್ಯವೇ ನಾಚೆ!

# ಹೂವಿನಹಾಡು.

ಕಾನಕೊಳದ ಬದಿಯಬಳ್ಳಿ
ತಿಂಗಳ ತೂಕಡಿಕೆಯಲ್ಲಿ
ಬಾಗಿಬಾಗಿ ನೀರ ಮುಟ್ಟಿಸೆ
ಕವಿಯ ಕಿವಿಯ ಲುಲಿಯಕನಸು
ಎದ್ದು ಕಾವ್ಯ ಬರೆಯುವಂತೆ
ಕನವರಿಸುವ ಹೂವುಹಾಡ
ಕೊಳದಲಟ್ಟಿಸೆ
ನೀರು ನಿವಿರಿ ಸವರಿಸವರಿ
ಬದಿಯ ಹಸಿರನು
ಮೇಲಿನೋಡೆ ತಂಗದಿರನು
ಸೂಸಿಸೂಸಿ ಬಿತ್ತಿದ
ಕೊಳದ ಹಾಡ ಪರಿಮಳವನು
ಮೂಸಿ ತೆರೆಯನೊತ್ತಿದ
ಆ ಕಾನೊಳಲೆಯುತಿಪ್ಪ ನನ್ನಕಲ್ಪನೆ
ಹಾಡಪರಿಮಳಕ್ಕೆ ಸಿಕ್ಕಿ ಕೊಳದಿ ಧೊಪ್ಪನೆ
ಮುಳುಗಿ ಮೇಲೆಬಂದು ಹಕ್ಕಿಯಂತೆಹಾಡಿತು

ಮರುನಿಮಿಷದಿ ಸೊಲ್ಲುಮರೆತು ಜೋತುಬಾಡಿತು
ಆ ಹಾಡು ಮರಳಿನನ್ನಎದೆಗೆ ಬಂದರೆ
ನಾನು ಮಹಾಕವಿಯು: ನೆನಹಿನೊಂದೆತೊಂದರೆ.

## ಆ ಒಂದು.

ಆ ಒಂದು ಮೊಲುದನಿ
ಕೇಳದೆ ದುಂದುವಿ
ಹಗಲೆಲ್ಲಾ ದುಂದೋ
ಹಗಲೆಲ್ಲಾ ದುಂದು
ಆ ಒಂದು ಬೆಳ್‌ಚೆಲುವ
ಕಾಣದೆಯೋ ಸಲುವ
ನಿದ್ದೆಗಳಿರುಳು
ಮೊದ್ದಿನ ಮರುಳು.
ಆ ಒಂದು ಸೋಕಿಗೆ
ಮೈನೀಡಿ ಜೀಕದೆ
ಮುಸುಕನು ಹೊದ್ದಾ
ಉಸುರೆಂತ ಪೆದ್ದ!
ಆ ಒಂದು ಯೆಂದಂದು
ನಾನೇಕೆಹಲುಬಲಿ
ಬರುವರೆಲ್ಲಾ ಬರಲಿ ಇತ್ತ
ತೆರವೋ ತೆರವೀಜಗಲಿ
ಆಗೋಬಂದ ಘಿಲಿಘಿಲಿಧಿತ್ತ!

## ತೆರೆದಿರಿಸು.

ತೆರೆದಿರಿಸೋ ತೆರೆದಿರಿಸು
ತೆರೆದಿರಿಸೋ ನಿನ್ನೆದೆ, ತಲೆ ಎಂದೂ.
ಹೊಸಚೆಲುವನು ಬೆಳಕಿನಅಲೆ ತಂದು
ತುಂಬುವವೋ ಗಳಿಗಳಿಗೆ
ಬೆಳಿಸುತದೇವನಸಲಿಗೆ
ಬೀಳಬೇಡ ನೀ ಮಣ್ಣು-ಪಂಗಡದಬಲೆ
ಅವು ಹಾಯ್ದು ಹೋಗಲೋ ತೆರೆದ ನಿನ್ನಎದೆ, ತಲೆ
ಒಳಿತೊಂದುಜಾವದಲಿ ಬಂದುದೇವ
ತಿಳಿಸುವನು ಸಾವಗಾರುಡಿಸಬಲ್ಲ ಆ ಕಲೆ
ತೆರೆದಿರಿಸೋ ತೆರೆದಿರಿಸು.

## ಒಂದೇಹಾಡು.

ಒಂದೇಹಾಡು
ಎಲ್ಲವೂ ಒಂದೆಹಾಡು
ಹುಟ್ಟುಸಾವುಗಳ ಮೆಟ್ಟಿ ಜೀಕುವದು ಹಾಡು
ಗೋಲಗೋಲಗಳ ತಾಳಹಾಕುವದು ನೋಡು
ಒಂದೇಹಾಡು.
ಸರಿಗಮದಸೊಲ್ಲು- ಹೂ ಹಸುಳೆನಗೆಯ ಮುದ್ದು
ಹದಮೀರಿಗುಲ್ಲು- ರಣರಂಗಭೇರಿಸದ್ದು.
ಒಂದೇಹಾಡು.
ಕೋಟಿಕೋಟಿ ಕವಿಕಂಠಮೀಟಿ ಹಾಡಿ
ಪಲ್ಲವಿಯನೆ ಹಿಡಿ
ಹೋದರಲ್ಲ ನೆಲಗೂಡಿ ನನಗದರ
ಸೊಲ್ಲನೊಂದ ನೀಡಿ
ದಯಮಾಡೇ
ಓ ಹಾಡೆ.
ಆ ಒಂದ ಹಾಡ ಅವನೊಬ್ಬಹಾಡಬಲ್ಲ
ಅದರ ಪೂರ್ದಸಿಯ ಕಿರಿಯತೆರೆಯ ನೊರೆ

ವರಿಸಲೆಳಸಿ ಎಲ್ಲಾ
ಕವಿಕುಲವೆ ಸೋತಿತಲ್ಲ
ಹಾಡೇ ನನ್ನಹಾಡೇ
ಒಂದಾಗಿ ಜಿನುಗು
ಒಲಿದೀತು ನಿನಗು ಹಾಡು
ಆ ಹಾಡು.

# ಕತ್ತಲೆ-ಬೆಳಕು.

ಬೆಳಕಿನೊಡನೆ ಕೋಣೆಯಲ್ಲಿ ಹುಡುಗನಾಡಿದ
ಹಳೆಯಮುದುಕ ಮೂಲೆಯಲ್ಲಿ ನಿದ್ದೆಮಾಡಿದ
ಬೆಳಕ ಹಿಡಿದುಬಿಟ್ಟು ಕುಣಿದು ಹುಡುಗಹಿಗ್ಗಿದ
ಮುದುಕಗೇರಿಬಂದು ಸಿಟ್ಟು ಸಿಡಿದು ನುಗ್ಗಿದ
"ಕೋಣೆಯಲ್ಲು ನಿನ್ನಗುಲ್ಲು: ನಿದ್ದೆತೀರದ
ಬಿದ್ದಿರುವೆನು ಬಾಗಿಲಿಕ್ಕಿ ಹೋಗಬಾರದೆ?"
ಎಂದನೊದರಿ ಹುಡುಗ ಹೆದರಿ ಹೊರಗೆ ಹಾರಿದ
ಬಾಗಿಲಿಕ್ಕಿ ಮುದುಕ ಹಸೆಯ ಮುಸುಕ ಸೇರಿದ
ತುಂಬುಗತ್ತಲೆಯಲಿ ಮುದುಕ ನಿದ್ದೆಮಾಡಿದ
ಬಯಲು ಬಳಕಿನಲೆಯಮೇಲೆ ಹುಡುಗನಾಡಿದ

## ಬೆಳಕು.

ಈ ಇದೂ ಬೆಳಕು ಆ ಅದೂ ಬೆಳಕು
ಕತ್ತಲೆಯೂ ಸತ್ತಬೆಳಕು
ಈ ಕಣ್ಣಕಣ್ಣೆ ಈ ಸೊನ್ನೆಸೊನ್ನೆ
ಅಣುಕಣಗಳಿಂದ ಆ ಬೆಳಕಿನಂದ
ಕಾಣದಿರೆ ಚಿತ್ತದಳುಕು.
ಎದೆಗೆ ಎದೆ ಇಲ್ಲಿ ಅದು ಇದಕೆಚೆಲ್ಲಿ
ಬೆಳ್ ಬೆಳಕ ಆಯ್ತು ಬದುಕೇ
ಇದೆಸಾಕು ಬಾಳುವುದಕೆ.
ಓಹೊ ಎಲ್ಲೆಲ್ಲೂ ಎಚ್ಚರದಗುಲ್ಲು
ಹೊತ್ತಿಹವು ಹಲವುಪಂಜು
ಚೆದರಿತೋ ಮಸಕು, ಮಂಜು
ಆದರೊಳಗೊಳಗೆ 'ಇದು ಸಹಜಬೆಳಗೆ?'
ಎಂಬೇನೊ ಗೊಣಗುಸೊಲ್ಲು.
ಅದಕಿದಕೆಜೋತು ಸಂಶಯವೆಸೋತು
ತಿಳಿಯಿತೋ ಕಣ್ಣಹೋಕು

ತಂದೆ ನಮಗೇಕೆ ನಂದಿಯೀತೋಕೆ
ಕಾಲುಗಳ ಕೊಳಗಸಾಕು?
ಬೆಳಕ ಬೆಳಗಿಸುವ ನಿನ್ನೊಳಗೆ ಯೆಸೆವ
ತಣಿದಹಣೆ ಬೆಳಕುಬೇಕು.

## ನಸುಕು.

ಹರಿದಿದೆ ನಸುಕು ಹರಿದಿದೆ ಮುಸುಕು
ಕೆಂಬೆಳಕಾಗುತಿದೆ
ಇರುಳೊರಕದ ತಪವೀ ಬೆಳಕಿನ ಸಫ-
ಲತೆಯಲಿ ಮಾಗುತಿದೆ.
ಹಾಲನು ಮಿಂದಿಹ ಗಾಳಿಯುತಾನೆ
ಮುಂಜೊರಗಿದೆ ನೋಡು
ವನವಾಸದ ಸೀತೆಯ ಮುಂಗೈ ಗಿಣಿ-
ಕತೆಹೇಳಿದೆ ಹಕ್ಕಿಯಹಾಡು.
ಮುಳ್ಳಿನಮೊನೆಯಲಿ ಇಬ್ಬನಿಮುತ್ತನು
ಯಾರದು ಸುರಿದವರು
ಮನುಹುಟ್ಟಿದ ಗಳಿಗೆಯ ಚೆಲುವುಗಳನು
ಮೋನದಿ ಬರೆದವರು?

## ನೆಳಲು-ಹೆಂಗಳು.

ಗಮಗಮಿಸಿತು ಬೆಳುದಿಂಗಳು
ಬಿಳಿಮೋಡ ದಾರಿಯಲಿ ಹೆಂಗಳು
ಹಸಿನೆಳಲಿನಂತೆ ಯೇನೋ ಚಿಂತೆ
ಯಲಿಕೆದರಿ ಬೀಸುಗುರುಳು
ಮೈಜೋಲಿ ಜಾರಿ ಕಾಲೆಳೆಯು ತೀರಿ
ಸಾಗಿದ್ದರೊಂದು ಇರುಳು
ಕೊಡಹೊತ್ತು ತೇಲಿನಡೆದು
ಚಂದ್ರಮಗೆ ಮೂರುಸಲ ಮೋನದಲ್ಲೆ ಬಲ-
ವಂದು ತುಸುವೆ ತಡೆದು
"ಚೆಲವು ನಲ್ ಬೆಳಗೆ!" ಯೆಂದು ಬಾನ್ ಹೊಳೆಗೆ
ಸುರಿದರದನುಒಡೆದು
ಮಗುವೆ ಹೋದೆಯಾ
ಲೀನವಾದೆಯಾ
ಇದೇನೋ ದಯಾ ದೇವಾ?
ಎಂದತ್ತು ಅತ್ತು ಆ ಯಿರುಳ ಹೊತ್ತು
ನರಳಿತ್ತು ಒಂದು ಜೀವ

## ಕೊನೆಯ ಕಾಣಿಕೆ.

ನಟ್ಟಿರುಳ ನೆರಳಿನಲಿ
ಕೊಟ್ಟೊಂದು ಕಾಣಿಕೆಯ
ನಿಟ್ಟನೇ ಹಾರಿದಳು ಕಂದರದಲಿ
ಮುಟ್ಟಲೇನೂ ಇಲ್ಲ
ದಿಟ್ಟಿಸಿದೆ "ಬಾಳ್ ನಲ್ಲ"
ಸೃಷ್ಟಿಯಲಿ ಪ್ರೇಮಕಾಗೀ ನರಬಲಿ?

## ಸೀಳುದಾರಿ (೨)

ಅವಳ ನನ್ನೆದುರು ಬೀಸಿಬಿದ್ದಿತೋ
ಉದ್ದ ಸೀಳುದಾರಿ
ಎಡಬಲಕೆಕಾನು: ನಸುಮುಸುಕು ಬಾನು-
ಬೆಳಕಿನಲಿ ನಾವುಜಾರಿ
ಏದಿಏದಿ ಕೊನೆಯಿರದಹಾದಿ
ಮನೆಬಿಟ್ಟು ಹಿಡಿದೆವೆಂದು
ಸೀಳುದಾರಿ ಬದಿಗಳಲಿ ಸಾಗಿರಲು
ಮುಳ್ಳುನಟ್ಟುನೊಂದು
ಬೆನ್ನಿಗಿಲ್ಲ ಕಣ್ಣೆಂದು ಹೆಣ್ಣುನಾ
ಹಿಂದು ಮಾಡಲಿಲ್ಲ
'ನಿಮ್ಮಮುಂದೆ ನಾ ನಡೆಯೆ ಚೆಂದ?'
ಯೆಂದವಳು ಮುಂದೆಒಲ್ಲ
ಹೀಗೆ ದಾರಿಯಲಿ ಕಾಲನಿರಿಸದೇ
ಕೈಗೆಕ್ಕೈಯ ಹೆಣೆದು
ಸಾಗೆ ಯೆಡಬಲದಿ ಸಿಳ್ಳುಹಾಕಿತೋ
ಅಡವಿತೂಗಿ ಮಣಿದು

ನಮ್ಮ ಪಯಣಗಳ ಏಳುಬೀಳುಗಳ

ಹೇಳಲೇಕೆಸಾರಿ?

ನಮ್ಮ ನಡುಗೆ ಕೊನೆತನಕ ಬಂದಿತಾ

ಸೀಳು ಸೀಳುದಾರಿ

× × ×

ಗುಡ್ಡಬೆಟ್ಟಗಳ ಅಡ್ಡದಾರಿ ತಪ್ಪಿಲ್ಲೊ

ಬಯಲುಬಂತು

ನಾವುತುಳಿಯುದಿಹ ಸೀಳುದಾರಿಯಲಿ

ನಗುವರಾರು ಇಂತು?

ನಡುವೆಬಿದ್ದ ಆ ಉದ್ದಸಾಕ್ಷಿಯೊದೆ

ಯೇರಿಬಂದನಾದು?

ಪಕಳೆಪಾದ! ನಗುವೊಗದ

ಬೆಳಗು! ಮುಗು!

ಸೀಳುದಾರಿತೇರು!!

## ಈ ಹಾಡು.

ನಾವು ಮುದುಕರಾದರೆ
ಈ ಪದಗಳಲೀ ಪರಿ
ಅರಳಿರುವದು ಗಮಗಮ.
ಹಾಡು ಅಂತಹಾಸುಮ
ನಮ್ಮೊಳೊಬ್ಬ ಸತ್ತರೆ
ಉಳಿದಜೀವಿ ಹತ್ತರೇ
ಒಲುಮೆ ಕಾಽಪಲ್ಮೆಯು
ಮಸಿಯೆ ಉಸಿರ ನಿಲ್ಮೆಯು.
ನಾವು ಹೊಸತು ಬಾಳನು
ಹೊಂದಿ ಯೀಽ ಹೂವನು
ಮೂಸೆ ಸೊಬಗು ಮಿಗುವದು
ನಮ್ಮನೋಡಿ ನಗುವದು!

## ನಮೋ ನಮೋ

ಮಾಯೆ ಮಾಯೆ ಬರಿಮಾಯೆ
ಯೆಂದೇನೊ ಕಿರಚುವರು ಕೆಲವುಜನರು
ಅವರು ಹಳಿವ ಈ ನೆಲದಚೆಲುವೆ
ಆ ಮುಕ್ತಿಗಿಕ್ತಿಗಳಿಗಡ್ಡಿಯಾಗಿದುದು ನಿಜವೆ?
ಹಾಗಾದರೆನಗಿರಲಿ ಮಣ್ಣು ಈ ಕಸಕಡ್ಡಿ
ನಮೋ ನಮೋ ದೂರಿಂದೇ ನಿನಗೆಮುಕ್ತಿಯೆ
ನನ್ನ ಪರೀಕ್ಷೆಗೆಂದೇ
ಚೆಲುವ ಚೆಲ್ಲಿದೆಯೆಂದೇ
ನೀ ಹೇಳಿದರೆ ತಂದೆ
ನಿನಗೂ ನಮೋನಮೋ ದೂರಿಂದೇ.
ಇರಲಿ: ಈ ಹುಟ್ಟುಸಾವ
ಓ ದೇವ
ನೀ ನಡಿಸು ಮುಂದೆ ಮುಂದೆ
ನನ್ನ ಪರೀಕ್ಷೆಗೆಂದೇ
ಬಾ ನಿಲ್ಲು ಬೆನ್ನಹಿಂದೆ.